ಪಂಚಮ

ಸಂಪುಟ : 4 ಸಂಚಿಕೆ : 6-7, 5, ಏಪ್ರಿಲ್ 1980 ಪಾಕ್ಷಿಕ ಬೆಲೆ : 20 ಪೈಸೆ

ದಲಿತ ಕಾರ್ಮಿಕರ ಮೇಲೆ ಪೋಲೀಸರ ಕ್ರೂರ ದೌರ್ಜನ್ಯ

[ಪಂಚಮ ಪ್ರತಿನಿಧಿಯಿಂದ]

ಉತ್ತರ ಪ್ರದೇಶದ ನಾರಾಯಣಪುರವನ್ನು ನಡುಗಿಸಿದ ಕ್ರೂರ ಪೋಲೀಸರ ಅಮಾನುಷ ದೌರ್ಜನ್ಯ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲೂ ತಲೆ ಎತ್ತಿದೆ. ಮಾರ್ಚ್ 15ರಂದು ರಾತ್ರಿ, ಸುಮಾರು ಹತ್ತುವರೆ ಗಂಟೆ ಮೇಲಾಗಿತ್ತು. ಆಗತಾನೆ ನಿದ್ದೆಹೋಗುತ್ತಿದ್ದ ದಲಿತ ಕಾರ್ಮಿಕ ಮಹಿಳೆಯರ ಮೇಲೆ ಪೋಲೀಸರ ಅತ್ಯಾಚಾರ, ದೌರ್ಜನ್ಯ-ಚಿತ್ರಹಿಂಸೆ ಮತ್ತು ಬಂಧನ.

ಈ ಹೇಯ ಕೃತ್ಯ ನಡೆದದ್ದು ಚಿಕ್ಕಮಗಳೂರು ತಾಲ್ಲೂಕಿನ ಅತ್ತಿಗುಂಡಿ ಸಮೀಪದ ಬೃಂದಾವನ ಎಸ್ಟೇಟಿನಲ್ಲಿ. ಈ ಎಸ್ಟೇಟ್ ಮಾಲೀಕ ಬೆಳ್ತಂಗಡಿ ಕಾಂಗ್ರೆಸ್ ಶಾಸಕ ಗಂಗಾಧರ ಗೌಡರ ಮಾವ ರಾಮಪ್ಪಗೌಡ.

ಸಿ. ಪಿ. ಐ. ನ ಕಾರ್ಮಿಕ ಸಂಘಟನೆ ಎ. ಐ. ಟಿ. ಯು. ಸಿ. ನೇತೃತ್ವದಲ್ಲಿ ಈ ದಲಿತ ಕಾರ್ಮಿಕರು ದಿನಕ್ಕೆ ಈಗ ನೀಡುತ್ತಿರುವ 5 ರೂ. ಬದಲು ನ್ಯಾಯಬದ್ಧ ಕೂಲಿ 7-05 ರೂ. ಕೊಡಬೇಕೆಂದು ಮತ್ತು 11 ಗಂಟೆ ದುಡಿಮೆ ಅವಧಿಯನ್ನು 8 ಗಂಟೆಗೆ ಇಳಿಸಬೇಕೆಂದು ಮತ್ತಿತರ ಬೇಡಿಕೆಗಳನ್ನು ಮುಂದಿಟ್ಟದ್ದಕ್ಕಾಗಿ ಎಸ್ಟೇಟ್ ಮಾಲೀಕ ರಾಮಪ್ಪಗೌಡ ಪೋಲೀಸ್ ಮತ್ತು ತನ್ನ ಗೂಂಡಾಗಳ ಬೆಂಬಲದಿಂದ ಈ ದೌರ್ಜನ್ಯ ನಡೆಸಿದ್ದಾನೆ.

ಚಿಕ್ಕಮಗಳೂರು ಗ್ರಾಮಾಂತರ ಸಬ್ ಇನ್ಸ್‌ಪೆಕ್ಟರ್ ನಾರಾಯಣ ಅಂದು ರಾತ್ರಿ ಸುಮಾರು 8-30 ಗಂಟೆಗೆ ಪೋಲೀಸ್ ವ್ಯಾನ್‌ನಲ್ಲಿ ತನ್ನ ಸಿಬ್ಬಂದಿಯೊಡನೆ ಎಸ್ಟೇಟ್ ಮಾಲೀಕ ರಾಮಪ್ಪಗೌಡನ ಮನೆಗೆ ಹೋಗಿ ಆತಿಥ್ಯ ಸ್ವೀಕರಿಸಿದ. ನಂತರ ಸುಮಾರು 10-30 ಗಂಟೆಯಲ್ಲಿ ರಾಮಪ್ಪಗೌಡನ 20 ಮಂದಿ ಗೂಂಡಾಗಳೊಡನೆ ದಲಿತ ಕಾರ್ಮಿಕರ ಮನೆಗಳಿಗೆ ರಾಕ್ಷಸರಂತೆ ನುಗ್ಗಿ ಸಿಕ್ಕ ಸಿಕ್ಕವರನ್ನು ಥಳಿಸಲಾರಂಭಿಸಿದ. ಮನೆಯ ಹೊರಗೆ ಮಲಗಿದ್ದವರನ್ನು ಹಿಡಿದು ಲಾಠಿ ಮತ್ತು ಚೈನುಗಳಿಂದ ಗೂಂಡಾಗಳು, ಪೋಲೀಸರು ಹೊಡೆಯಲಾರಂಭಿಸಿದರು. ಮತ್ತೆ ಕೆಲವರು ಮಹಿಳೆಯರ ಬಟ್ಟೆ ಹಿಡಿದು ಎಳೆದಾಡಿ ಅತ್ಯಾಚಾರಕ್ಕೆ ಬಲಾತ್ಕರಿಸಿದರು. ಹೆಂಗಸು ಮಕ್ಕಳೆನ್ನದೆ ಹೊಡೆದರು-ಬಡಿದರು.

ಈ ರಾಕ್ಷಸಿ ಕೃತ್ಯ ನಡೆಸಿದ ಪೋಲೀಸರು-ಗೂಂಡಾಗಳು ಮಾಲೀಕನ ಪರವಾಗಿ ಕೆಲವು ದಾಖಲೆ ಪತ್ರಗಳಿಗೆ ಬಲಾತ್ಕಾರದಿಂದ ಸಹಿ ಪಡೆದರು, ಅಲ್ಲದೆ ಅವರು ವಾಸಿಸುತ್ತಿದ್ದ ಮನೆಗಳಿಂದಲೂ ಅವರನ್ನೆಲ್ಲ ಹೊರಗೆ ಹಾಕಿದ್ದು ಈಗ ಕಾರ್ಮಿಕರೆಲ್ಲ ಬೀದಿ ಪಾಲಾಗಿದ್ದಾರೆ.

ಈ ರೋಚಕ ಘಟನೆಗೆ ಬಲಿಯಾಗಿ ಈಗ ಚಿಕ್ಕಮಗಳೂರು ಪೋಲೀಸ್ ಠಾಣೆ ಎದುರು ಧರಣಿ ಸತ್ಯಾಗ್ರಹ ಚಳವಳಿಯಲ್ಲಿ ತೊಡಗಿರುವ ಮಹಿಳಾ ಕಾರ್ಮಿಕರು ಬಿಕ್ಕಿಬಿಕ್ಕಿ ಅಳುತ್ತ ಹೇಳುವ ಘಟನೆಗಳು ಕರಳುಕತ್ತರಿಸುವಂತಿವೆ.

(2ನೇ ಪುಟ ನೋಡಿ)

ಪಿಪ್ರಾ ಕಗ್ಗೊಲೆಗೆ ಪ್ರತಿಭಟನೆ

ಪಿಪ್ರಾ ಮತ್ತು ಪಾರಸ್‌ಬಿಘಾ ಅಮಾನುಷ ಕಗ್ಗೊಲೆಯನ್ನು ವಿರೋಧಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಇತ್ತೀಚೆಗೆ ಅನೇಕ ಕಡೆ ಪ್ರತಿಭಟನಾ ಪ್ರದರ್ಶನ ನಡೆಸಿತು.

ಮಾರ್ಚ್ 5 ರಂದು ಚಿಕ್ಕಮಗಳೂರು. 10 ರಂದು ಮೈಸೂರು. 11 ರಂದು ಕೋಲಾರದಲ್ಲೂ ಮತ್ತು ಇನ್ನೂ ಇತರ ಸ್ಥಳಗಳಲ್ಲಿ ಮೆರವಣಿಗೆ ನಡೆಸಿ ಪಿಪ್ರಾ ನರಮೇಧವನ್ನು ಖಂಡಿಸಲಾಯಿತು.

ತುಮಕೂರು ಮುಂತಾದ ಕಡೆ ಪಿಪ್ರಾ ಹತ್ಯಾಕಾಂಡವನ್ನು ಖಂಡಿಸುವ ಕರಪತ್ರಗಳನ್ನು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಬೀದಿ ಬೀದಿಯಲ್ಲಿ ಹಂಚಿ ತಮ್ಮ ಪ್ರತಿಭಟನೆ ಸೂಚಿಸಿದರು.



ಪಿಪ್ರಾ ನರಮೇಧದ ವಿರುದ್ಧ ಚಿಕ್ಕಮಗಳೂರು ದ. ಸಂ. ಸ. ಪ್ರದರ್ಶನ ನಡೆಸಿತು.

ಅಂಬೇಡ್ಕರ್‌ವಾದ: ಹೊಸ ಆಯಾಮ

ಶತಶತಮಾನಗಳಿಂದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಅಲಕ್ಷಿತರಾಗಿ ತುಳಿತಕ್ಕೊಳಪಟ್ಟ ದಲಿತ ವರ್ಗಗಳ ವಿಮೋಚನೆ ಸಂಕೇತವಾಗಿ ಆ ವರ್ಗಗಳಲ್ಲಿ ಎಚ್ಚರವನ್ನುಂಟು ಮಾಡಿದ ಡಾ. ಬಿ. ಆರ್. ಅಂಬೇಡ್ಕರ್‌ರವರ 'ರಾಷ್ಟ್ರ ಸಮಾಜವಾದದ ಬಗೆಗಿನ ವಿಶ್ಲೇಷಣೆ' ಇಂದಿನ ಇಂಡಿಯಾವನ್ನು ಅತ್ಯಂತ ಸೂಕ್ಷ್ಮವಾಗಿ ಮತ್ತು ಸುಲಭವಾಗಿ ಅರಿತುಕೊಳ್ಳಲು ಸಾಧ್ಯ.

ಈ ರಾಷ್ಟ್ರದ ಈ ಹೊತ್ತಿನ ಅರ್ಥಿಕ ಪರಿಸ್ಥಿತಿ, ಅದರಲ್ಲಿನ ದಲಿತರ ಬದಲಾಗದ ಸ್ಥಿತಿ, ಹಾಗೆಯೇ ಪ್ರಭುತ್ವದ ಹುಟ್ಟು, ಅದು ರಾಜಕೀಯವಾಗಿ ನಿಯಂತ್ರಿಸುತ್ತಿರುವ ಅರ್ಥವ್ಯವಸ್ಥೆ, ಜಾತಿಪದ್ಧತಿ ಮತ್ತು ಧಾರ್ಮಿಕ ಪದ್ಧತಿಯನ್ನು ತುಂಬಾ ಸೂಕ್ಷ್ಮವಾಗಿ ವಿವೇಚಿಸಿದ್ದಾರೆ.

ದಲಿತ ಜನಾಂಗ ತಮ್ಮ ವಿಮೋಚನೆ ಕಂಡುಕೊಳ್ಳಲು ಇಂದು ತುರ್ತಾಗಿ ಒಂದುಗೂಡಿ ರಾಷ್ಟ್ರದ ರಾಜಕೀಯ ಶಕ್ತಿಯನ್ನು ವಶಪಡಿಸಿಕೊಳ್ಳಬೇಕೆಂತಲೂ, ಜೊತೆಗೆ ಜನತೆ ಜಾತೀಯತೆಯಿಂದ ದೂರವಿರಲು ಸಮಾಜವಾದಿ ಬುದ್ಧನ "ಬಹಾಜನ್ ಹಿತಾಯ ಬಹೂಜನ್ ಸುಖಾಯ" ಎಂಬ ತತ್ವವನ್ನು ಅವರಲ್ಲಿ ಬೇರೂರಿಸಬೇಕೆಂದು ಜಾತಿ ವಿನಾಶದ ಬಗ್ಗೆ ಒತ್ತಿ ಹೇಳಿರುವರು.

ಇವೆಲ್ಲಕ್ಕಿಂತ ನಾವು ಇಂದು ಗಮನಿಸಬೇಕಾದದ್ದು "ರಾಜಕೀಯ ಶಕ್ತಿ ಕೆಲವೊಂದು ಜನಗಳ ಗುತ್ತಿಗೆಯಾಗಿ ಬಿಡಬಹುದು. ಈ ರೀತಿಯ ಗುತ್ತೇದಾರಿಕೆಯು ಕೆಳವರ್ಗದ ಶ್ರೇಯೋಭಿವೃದ್ಧಿಯನ್ನು ಹಾಳುಮಾಡುವಂಥದ್ದಾಗಿರುವುದು." ಎಂಬ ಅವರ ಭವಿಷ್ಯದ ಮುನ್ನೆಚ್ಚರಿಕೆ ಇಂದಿನ ಸ್ಥಿತಿಗೆ ಕೈಗನ್ನಡಿಯಲ್ಲದೆ ಅಂಬೇಡ್ಕರ್‌ರವರ ಸಾರ್ವಕಾಲಿಕ ದೃಷ್ಟಿಕೋನವನ್ನು ಇಲ್ಲಿ ಗುರುತಿಸಬಹುದಾಗಿದೆ. ಶೋಷಿತ ಜನರ ಭವಿಷ್ಯದ ಬಗ್ಗೆಯೂ ಅವರಿದ್ದ ಅರಿವು-ಎಚ್ಚರ ಒಬ್ಬ ಕ್ರಾಂತಿಕಾರಿ ನಾಯಕನಿಗಿರಬೇಕಾದ ಗುಣವನ್ನು ಪ್ರತಿಬಿಂಬಿಸುತ್ತದೆ.

ಅಂಬೇಡ್ಕರ್‌ರವರು ಮುಂದುವರೆದು "ನಾನು ಈ ಸಂವಿಧಾನವನ್ನು ರಚಿಸಿದರೂ, ಇದರಿಂದ ನನಗೆ ತೃಪ್ತಿಯೇನೂ ಸಿಕ್ಕಿಲ್ಲ...ನಿಜವಾದ ಬಡವರು ಸಮಾಜದ ಇತರೆ ವರ್ಗದ ಜನರ ಸಮಕ್ಕೆ ಬರದೆ ಹೋದರೆ, ಈ ಹಸಿದ ಹೊಟ್ಟೆಯ ಜನ ಈ ಸಂವಿಧಾನವನ್ನು ಸುಟ್ಟು ಹಾಕುವರು ಹಾಗೂ ದಂಗೆ ಏಳುವರು ಎಂಬ ನಂಬಿಕೆ ನನಗಿದೆ" ಎಂದು ಈ ದೇಶದಲ್ಲಿ ಆಳವಾಗಿ ಬೆಳೆದಿರುವ ಜಾತಿಪದ್ಧತಿ, ಆರ್ಥಿಕ ಅಸಮತೆಯನ್ನು ಕಂಡು ತಾವೇ ರಚಿಸಿದ ಸಂವಿಧಾನದ ಬಗ್ಗೆಯೂ ಒಂದೂಚೂರು ಶ್ಲಾಘನೆಯಿಲ್ಲದೇ ಅಸಮಾಧಾನದ ಮಾತುಗಳನ್ನು ಪ್ರಾಮಾಣಿಕವಾಗಿ ಹೇಳುವ ಮೂಲಕ ಶೋಷಿತರೆಲ್ಲ ಒಗ್ಗಟ್ಟಾಗಿ ಕ್ರಾಂತಿಕಾರಿ ಹೋರಾಟ ಆರಂಭಿಸಬೇಕೆಂದು ಕರೆಕೊಟ್ಟಿರುವುದು ಈ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯ ಬಯಕೆ ತುಡಿತವನ್ನು ಸ್ಪಷ್ಟಪಡಿಸುತ್ತದೆ.

ಅಂಬೇಡ್ಕರ್‌ರವರು ರಾಷ್ಟ್ರ ಸಮಾಜವಾದದ ಬಗೆಗೆ ವಿಶ್ಲೇಷಣೆ ಮಾಡುತ್ತ ಈ ದೇಶದ ಆರ್ಥಿಕ ಚೌಕಟ್ಟನ್ನು ಬಹುಚೆನ್ನಾಗಿ ವಿಶ್ಲೇಷಿಸಿದ್ದಾರೆ. ಅವರ ಪ್ರತಿಯೊಂದು ವಿಷಯದ ಮೇಲಿನ

ಪ್ರತಿಕ್ರಿಯೆ

ವಿಶ್ಲೇಷಣೆಯಲ್ಲೂ ವರ್ಗಪ್ರಜ್ಞೆ ಇದ್ದು, ಅಂಬೇಡ್ಕರ್‌ರವರು ಕೇವಲ ಸಾಮಾಜಿಕ ಬದಲಾವಣೆಯಿಂದ ದಲಿತರ ವಿಮೋಚನೆ ಬಯಸಿದ್ದರೆಂಬ ಸಂಪ್ರದಾಯ ಕಮ್ಯೂನಿಸ್ಟರ ಆರೋಪಕ್ಕೆ ಈ ಲೇಖನ ತಕ್ಕ ಉತ್ತರಕೊಟ್ಟಿದೆ.

ಅಂಬೇಡ್ಕರ್‌ರವರ ಆರ್ಥಿಕ ಪ್ರಜ್ಞೆಯನ್ನು ಗುರುತಿಸಿ ಡಿ. ಎಚ್. ಶ್ರೀಕಾಂತ್‌ರವರು ಬರೆದಿರುವ ಈ ಪ್ರಬುದ್ಧ ಲೇಖನ ಅಂಬೇಡ್ಕರ್ ಬಗೆಗೆ ಹೊಸ ಬಗೆಯಲ್ಲಿ ಯೋಚಿಸುವಂತೆ ಮಾಡಿದೆ. ಮೂಲ ಲೇಖನವನ್ನು ಕನ್ನಡಿಸಿದ ದೇವಯ್ಯ ಹರವೆ ಮತ್ತು ಧಾರಾವಾಹಿಯಾಗಿ ಪ್ರಕಟಿಸಿದ 'ಪಂಚಮ' ಅಂಬೇಡ್ಕರ್‌ವಾದದ ಬಗ್ಗೆ ಹೊಸ ಆಯಾಮ ಸೃಷ್ಟಿಸಿದೆ.

ಬೆಂಗಳೂರು — ಟಿ. ಶ್ರೀನಿವಾಸ ಮೂರ್ತಿ

ದಲಿತ ನುಡಿ

ದಲಿತ ಜಾತಿಗಳ ಇತಿಹಾಸ ಅಪವಿತ್ರವಾಗಿ, ಹೇಯವಾಗಿ ನಿರೂಪಿತವಾಗಿದೆ. ನೂತನ ಚರಿತ್ರೆಯನ್ನು ರಚಿಸಲು ನಿರಂತರವಾದ ಹೋರಾಟ ಅಗತ್ಯ.

—ಅಂಬೇಡ್ಕರ್

ಪ್ರೌಢಿಮೆಯ ಲೇಖನ

ಕಳೆದ ಆರು ಸಂಚಿಕೆಯಿಂದ ಪ್ರಕಟವಾದ "ರಾಷ್ಟ್ರ ಸಮಾಜವಾದದ ಬಗೆಗೆ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಶ್ಲೇಷಣೆ" ಲೇಖನ ತುಂಬಾ ಚೆನ್ನಾಗಿತ್ತು. ತಿಂಗಳಿಗೊಮ್ಮೆ ಧಾರಾವಾಹಿಯಾಗಿ ಒಂದು ರೀತಿಯಲ್ಲಿ gap ಆಗುತ್ತಿದ್ದು ಎಷ್ಟೇ ತ್ರಾಸವಾದರೂ ತಪ್ಪದೇ ಓದುತ್ತಿದೆ.

ಅಂಬೇಡ್ಕರ್‌ರವರು ಈ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ವಿವರಿಸುತ್ತಾ ಈ ಇಂಡಿಯಾದಲ್ಲಿ ಎಲ್ಲ ಕ್ಷೇತ್ರದಲ್ಲೂ ವ್ಯಾಪಿಸಿ ಬೇರುಬಿಟ್ಟಿರುವ ಶೋಷಣೆಯನ್ನು ಗುರುತಿಸಿರುವರು. ಅಲ್ಲದೆ ಇವೆಲ್ಲವುಗಳ ಬಗ್ಗೆ ವಿಶಾಲ ಮನೋಭಾವದಿಂದ ಸಾರ್ವಕಾಲಿಕ ದೃಷ್ಟಿಯಿಂದ ಪರಿಸ್ಥಿತಿಯ ಆಳ-ಅಗಲಗಳನ್ನು ವಿವೇಚಿಸುತ್ತಾ ದಲಿತರ ವಿಮೋಚನೆ ಬಗೆಗೆ ಹೋರಾಟದ ಅಗತ್ಯವನ್ನು ಹೇಳಿರುವುದು ಈಗ ಅದು ಎಷ್ಟೊಂದು ಅನಿವಾರ್ಯ ಎಂಬುದನ್ನು ನಾವೆಲ್ಲ ಆಲೋಚಿಸುವಂತೆ ಮಾಡಿದ್ದಾರೆ. ಒಟ್ಟಿನಲ್ಲಿ ಇದೊಂದು ಪ್ರೌಢಿಮೆಯ ಲೇಖನ.

ಬೆಂಗಳೂರು — ಸುಮಿತ್ರಾ

ಪೊಲೀಸರ ದೌರ್ಜನ್ಯ

(1ನೇ ಪುಟದಿಂದ)

ದೌರ್ಜನ್ಯ ನಡೆಸಿದ್ದೇ ಅಲ್ಲದೆ ಈಗ ಏಳು ಮಂದಿ ಕಾರ್ಮಿಕರನ್ನ ಜೈಲಿಗೆ ತಳ್ಳಲಾಗಿದೆ.

ಈ ಹೇಯ ಘಟನೆಯನ್ನು ಖಂಡಿಸಿ ಮಾರ್ಚ್ 19ರಂದು ಎ. ಐ. ಟಿ. ಯು. ಸಿ. ಮತ್ತು ದಲಿತ ಸಂಘರ್ಷ ಸಮಿತಿ ಚಿಕ್ಕಮಗಳೂರು ಶಾಖೆಯು ಪ್ರತಿಭಟನೆ ಪ್ರದರ್ಶನ ನಡೆಸಿದವು.

ಪೋಲೀಸ್ ಮತ್ತು ಎಸ್ಟೇಟ್ ಮಾಲೀಕನ ದೌರ್ಜನ್ಯ ಖಂಡಿಸಿ ಮಹಿಳೆಯರು ಸೇರಿದಂತೆ ಅನ್ಯಾಯಕ್ಕೊಳಗಾದ ದಲಿತ ಕಾರ್ಮಿಕರು ಪೋಲೀಸ್ ಠಾಣೆ ಎದುರು ಎ. ಐ. ಟಿ. ಯು. ಸಿ. ನೇತೃತ್ವದಲ್ಲಿ ಕಳೆದ 15 ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ.

ದಲಿತರಿಗೆ ಜಮೀನು: ಸರ್ಕಾರದ ವಂಚನೆ ಕ್ರಮ

ವರದಿ : ಪಾಂಡುರಂಗ

ಬೇವಿನ ಬೆಂಚಿ ರಾಯಚೂರು ತಾಲ್ಲೂಕಿನ ಒಂದು ಕುಗ್ರಾಮ. ಸುಮಾರು 600 ಜನಸಂಖ್ಯೆಯುಳ್ಳಿರುವ ಇಲ್ಲಿ 15 ಮನೆಗಳು ದಲಿತರವು. ದಲಿತರ ಜೋಪಡಿಗಳೇ ಅವರ ಬಡತನವನ್ನು ಬಿಚ್ಚಿ ಹೇಳುವಂತಿವೆ.

ದಲಿತರ ಉದ್ಯೋಗ ಮುಖ್ಯವಾಗಿ ಹೊಲಗದ್ದೆಗಳಲ್ಲಿ ಕೂಲಿ. ಗ್ರಾಮದ ಶ್ರೀಮಂತರ ಜಮೀನಿನಲ್ಲಿ ಹಗಲು ರಾತ್ರಿ ಎನ್ನದೆ ವರ್ಷವಿಡೀ ದುಡಿದು ಬೆಳೆತೆಗೆವ ಇವರು ಹಸಿವಿನಿಂದ ನರಳಿಕೊರಳಿ ಇದ್ದು ಸತ್ತಂತೆ ಪಳೆಯುಳಿಕೆ ಜೀವ ಉಳಿಸಿಕೊಂಡಿದ್ದಾರೆ.

ಗ್ರಾಮದ ಸವರ್ಣೀಯ ಭೂಮಾಲೀಕರು ದಲಿತರನ್ನು ಬಹಳ ವರ್ಷಗಳಿಂದ ಎದುರಿಸಿ ಬೆದರಿಸಿ ತಮ್ಮ ಹಿಡಿತದಲ್ಲಿಟ್ಟುಕೊಂಡು ಪ್ರಾಣಿಗಳಂತೆ ನಡೆಸಿಕೊಳ್ಳುತ್ತಿದ್ದಾರೆ.

ಈ ಅಮಾನವೀಯ ಹಿಂಸೆಯಿಂದ ಜೀವ ಹಿಡಿದುಕೊಂಡು ದಿನಗಳನ್ನು ನೂಕುವ ದಲಿತರು ಎಂದಾದರೂ ತಮ್ಮ ಬಗ್ಗೆ ಅನುಕಂಪ, ಸಹಾನುಭೂತಿ ತೋರಿ ನಾಕು ಮಾತನಾಡುವ ಜನರ ಜತೆ ತಮ ದುಃಖ ದುಮ್ಮಾನ ತೋಡಿಕೊಳ್ಳುತ್ತಾ ಗಳಗಳನೆ ಅಳುತ್ತಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಯಚೂರು ಜಿಲ್ಲಾ ಘಟಕದ ಕಾರ್ಯಕರ್ತರಾದ ನಾವು ಅಲ್ಲಿಗೆ ಹೋದಾಗ ಈ ಅನುಭವ ನಮಗಾಯಿತು. ಸವರ್ಣೀಯ ಜಮೀನ್ದಾರರ ನಿರಂತರ ಕಿರುಕುಳ-ಹಿಂಸೆಯನ್ನು ಹೇಳಿಕೊಳ್ಳುತ್ತ ಸಹಾಯಕ್ಕಾಗಿ ಆಸೆಗಣ್ಣಿನಿಂದ ನಮತ್ತ ಕೈ ಜೋಡಿಸಿ ಮನವರಿಕೆ ಮಾಡಿಕೊಂಡರು.

ಕೆಲವು ದಲಿತರಿಗೆ ಸರ್ಕಾರ ಕಾಗದದಲ್ಲಿ ಬೇಸಾಯಕ್ಕೆಂದು ಭೂಮಿ ಮಂಜೂರು ಮಾಡಿದೆ. ಒಂಬತ್ತು ಜನರಿಗೆ ವಿಶೇಷ ತಹಸಿಲ್ದಾರರು ಸಾಗುವಳಿ ಚೀಟಿಯನ್ನು ನೀಡಿದ್ದಾರೆ ಆದರೆ ಮಂಜೂರಾತಿ ಭೂಮಿ ಎಲ್ಲೆಂದೂ ತಿಳಿಯಪಡಿಸಿಲ್ಲ.

ಈ ನಡುವೆ ದಲಿತರಿಗೆ ಭೂ ಮಂಜೂರಾತಿ ವಿಷಯ ತಿಳಿದ ಜಮೀನ್ದಾರರು ಮತ್ತು ಶ್ರೀಮಂತರು "ನಮ್ಮ ಹೊಲಗಳಿಗೆ ಕಾಲಿಟ್ಟರೆ ಅಲ್ಲೇ ಕಡಿದು ಹಾಕ್ತೀವಿ, ಮನೆಗಳಿಗೆ ಬೆಂಕಿ ಹಚ್ಚಿ ಸುಟ್ಬುಟ್ಟೀವಿ" ಎಂದೆಲ್ಲಾ ಬೆದರಿಕೆ ಹಾಕುತ್ತಿದ್ದಾರೆ. ಜಮೀನು ಮಂಜೂರಾತಿ ಆಜ್ಞೆ ಕೊಟ್ಟ ತಹಸಿಲ್ದಾರ್ ಇನ್ನು ಐದಾರು ದಿನಗಳಲ್ಲಿ ಬಂದು ನಿಮಗೆ ಮಂಜೂರಾಗಿರುವ ಭೂಮಿ ತೋರಿಸಿ ಕೊಡುವುದಾಗಿ ಭರವಸೆ ಕೊಟ್ಟರು. ಆಸೆಗಣ್ಣಿನಿಂದ ತಹಸಿಲ್ದಾರ್‌ರವರ ಆಗಮನವನ್ನೇ ಎದುರು ನೋಡುತ್ತಿದ್ದ ದಲಿತರು ಈಗ ನಿರಾಶೆಯಾಗಿದ್ದಾರೆ. ಬರುತ್ತೇನೆಂದು ಹೇಳಿದ ತಹಸಿಲ್ದಾರ್ ಐದಾರು ದಿನಗಳಲ್ಲ ಈಗ ಮೂರುವರುಷ ತುಂಬಿದರು. ಇತ್ತ ಮುಖ ತೋರಿಸಿಲ್ಲ.

ಒಂದೆಡೆ ಜಮೀನ್ದಾರರ ಬೆದರಿಕೆಗೆ ಅಂಜಿರುವ ದಲಿತರು ಅಧಿಕಾರಿಗಳ ಭರವಸೆ ಒಂದು ಕಪಟ ಮೋಸವೆಂದು ನಿರಾಶೆಯಿಂದ ದಿಕ್ಕು ತೋಚದೆ ಕುಳಿತಿದ್ದಾರೆ. ಇದಿಷ್ಟಾದರೆ ನಿವೇಶನದ ಕತೆಯೂ ಇದೆ ದಾಟಿಯದು, 1975ರ ಫೆಬ್ರುವರಿಯಲ್ಲಿ ದಲಿತರಿಗೆ ನಿವೇಶನ ಮಂಜೂರು ಮಾಡಿದ್ದರು ಸರ್ಕಾರದ ಅನಾಸಕ್ತಿ ಮತ್ತು ಜಮೀನುದಾರರ

ವಿಶೇಷ ವರದಿ

ದಬ್ಬಾಳಿಕೆಯಿಂದ ಅವು, ಸಹ ದಲಿತರಿಗೆ ದಕ್ಕಿಲ್ಲ. ದಲಿತ ಸಂಘರ್ಷ ಸಮಿತಿ ರಾಯಚೂರು ಜಿಲ್ಲಾ ಘಟಕವು ದಲಿತರ ಈ ಸಮಸ್ಯೆಗಳನ್ನು ಕೈಗೆತ್ತಿಕೊಂಡಿದ್ದು ಹೋರಾಟದ ಗೆಲುವಿಗೆ ಎಲ್ಲಾ ಪ್ರಗತಿ ಪರ ಸಂಘಟನೆಗಳ ನೆರವನ್ನು ಕೋರಿದೆ,

ಶ್ರೀಮತಿ ಅಂಬೇಡ್ಕರ್‌ರವರಿಂದ ಇಂದಿರಾಗಾಂಧಿಗೆ ಛೀಮಾರಿ

ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡಿದ ಇಂದಿರಾಗಾಂಧಿಗೆ ದಲಿತರ ನರಮೇಧ ನಡೆದ ಪಾರಸ್‌ಬಿಘಾ ಮತ್ತು ಪಿಪ್ರಾಕ್ಕೆ ಹೋಗಲು ಆಗಲಿಲ್ಲವೆ? ಅಧಿಕಾರ ಕಳೆದುಕೊಂಡಿದ್ದಾಗ ಮಾತ್ರ ಆಕೆ ದಲಿತರಿಗೆ ಮೊಸಳೆ ಕಣ್ಣೀರಿಡುತ್ತಿದ್ದಳು ಎಂದು ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಧವಾ ಪತ್ನಿ ಡಾ. ಸವಿತಾ ಅಂಬೇಡ್ಕರ್ ಅವರು ಇಂದಿರಾಗಾಂಧಿಗೆ ಛಿಮಾರಿ ಹಾಕಿದ್ದಾರೆ.

ದೆಹಲಿಯಲ್ಲಿ ಮಾರ್ಚ್ 15 ಮತ್ತು 16ರಂದು ಪ್ರಥಮ ಬಾರಿಗೆ ನಡೆದ ದಲಿತ ಪ್ಯಾಂಥರ್ಸ್ ರಾಷ್ಟ್ರೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಇಂದಿರಾಗಾಂಧಿ ಮತ್ತು ಜಗಜೀವನರಾಂ ದಲಿತರ ಏಳಿಗೆಗೆ ಏನನ್ನೂ ಮಾಡಲಿಲ್ಲವೆಂದು ಕಟುವಾಗಿ ಟೀಕಿಸಿದರು.

ಜಗಜೀವನರಾಂರವರು 1946ರಿಂದ ಇತ್ತೀಚಿನವರೆಗೂ ಅಧಿಕಾರದಲ್ಲಿದ್ದಾಗ ದಲಿತರ ಮೇಲೆ ನಡೆದ ಯಾವುದೇ ದೌರ್ಜನ್ಯದ ವಿರುದ್ಧವೂ ಸೊಲ್ಲೆತ್ತಲಿಲ್ಲ ಎಂದು ಅವರು ರಾಂ ವರ್ತನೆಯನ್ನು ಖಂಡಿಸಿದರು.

ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯಕ್ಕಾಗಿ ಸಂಘಟಿತರಾಗಿ ಹೋರಾಡಬೇಕೆಂದು ಶ್ರೀಮತಿ ಅಂಬೇಡ್ಕರ್ ಪ್ಯಾಂಥರ್ಸ್‌ಗೆ ಕರೆ ನೀಡಿದರು.

ದಲಿತರ ದುತ್ತು ದಲಿತ ಮಹಿಳೆಯರ ಮೇಲಿನ ನಿರಂತರ ದೌರ್ಜನ್ಯ ಮತ್ತು ಶೋಷಣೆಯನ್ನು ತಡೆಯಲು ಅಹಿಂಸಾತ್ಮಕ ಮಾರ್ಗದಲ್ಲಿ ಹೋರಾಟ ನಡೆಸಬೇಕಾಗಿರುವ ಜವಾಬ್ದಾರಿ ತಮ್ಮ ಮೇಲಿದೆ ಎಂದು ಪ್ಯಾಂಥರ್ಸ್ ಸಮಾವೇಶದಲ್ಲಿ ಅಭಿಪ್ರಾಯಕ್ಕೆ ಬಂದಿತು ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಬ್ಲ್ಯಾಕ್ ಪ್ಯಾಂಥರ್ಸ್ : ಹೋರಾಟಕ್ಕೆ ಪ್ರೊ

ಭೂಮಿ, ವಸತಿ, ಅನ್ನ, ಬಟ್ಟೆ, ಶಿಕ್ಷಣ, ನ್ಯಾಯ ಮತ್ತು ಶಾಂತಿ ಮನುಷ್ಯನ ಮೂಲಭೂತ ಅಗತ್ಯತೆಗಳು, ಇವೆಲ್ಲ ಸಮಾಜದಲ್ಲಿ ನಡೆಯಬಹುದಾದ ಕ್ರಾಂತಿಯ ಪ್ರತಿಫಲಗಳು.

ಕ್ರಾಂತಿ ಸಂಭವಿಸುವುದು ಇಂತಹವುಗಳಿಗಾಗಿಯೆ. ರಷ್ಯದಲ್ಲಿ ಭೂಮಿ, ಅನ್ನ ಮತ್ತು ಶಾಂತಿಗಾಗಿ ಆದರೆ ಚೀನಾದಲ್ಲಿ ಉಳುವವನಿಗೇ ಭೂಮಿ ಸಿಗಬೇಕೆಂಬುದಕ್ಕೆ ಕ್ರಾಂತಿ ನಡೆಯಿತು.

ಶತಶತಮಾನಗಳಿಂದ ಆಫ್ರೋ-ಅಮೆರಿಕಾ ರಾಷ್ಟ್ರಗಳಲ್ಲಿ ವರ್ಣದ್ವೇಷದ ದಾಸ್ಯ ಸಂಕೋಲೆಯಿಂದ ಅಮಾನವೀಯ ಶೋಷಣೆಗೆ, ಬಿಳಿಯರ ದಬ್ಬಾಳಿಕೆಗೆ ಒಳಗಾಗಿರುವ ಕರಿಯರು (ನಿಗ್ರೋ) ಕಳೆದ ಒಂದುವರೆ ದಶಕದಿಂದ ಮೇಲೆ ತಿಳಿಸಿದ ಮೂಲಭೂತ ಅಗತ್ಯತೆಗಳಿಗಾಗಿ ಅಮೆರಿಕಾದಲ್ಲಿ ಕ್ರಾಂತಿಕಾರಕ ಹೋರಾಟ ಆರಂಭಿಸಿದ್ದಾರೆ. "ಬ್ಲಾಕ್ ಪ್ಯಾಂಥರ್ಸ್" ಹೆಸರಿನಲ್ಲಿ ಭುಗಿಲೆದ್ದ ಸಂಘಟನೆ ಅಮೆರಿಕಾದಲ್ಲಿನ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ಬಿಳಿಯರ ಆಡಳಿತಕ್ಕೆ ಒಂದು ರೀತಿಯ ಷಾಕ್ ಉಂಟುಮಾಡಿ ಭಯವೊಡ್ಡಿದೆ.

ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟವೇ ದಾರಿ ಎಂಬ ನಿಲುವಿನ ಬ್ಲಾಕ್ ಪ್ಯಾಂಥರ್ಸ್, ಒಂದು ಕ್ರಾಂತಿಕಾರಿ ಸಂಘಟನೆ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳಿಂದ ಅಧಿಕಾರ ಕಸಿದುಕೊಂಡು ಬಡಜನತೆಗೆ ಹಂಚಬೇಕೆಂಬುದು ಇದರ ಮುಖ್ಯ ಗುರಿ.

ಕಳೆದ ಶತಮಾನದಿಂದ ಒಂದಲ್ಲ ಒಂದು ರೀತಿಯಲ್ಲಿ ಕರಿಯರ ಹೋರಾಟ ಆರಂಭ. ಆ ಎಲ್ಲಾ ಹೋರಾಟಗಳಿಗೂ ನಿಜವಾಗಿ ಒಂದು ನೆಲೆ ಸಿಕ್ಕಿದ್ದು ಕಳೆದ ಹತ್ತನ್ನೆರಡು ವರ್ಷಗಳಿಂದೀಚೆಗೆ, ಕ್ರಾಂತಿಕಾರಕ ಮತ್ತು ವಿಚಾರ ಮನೋಭಾವವುಳ್ಳ ಕರಿಯ ಯುವಕರು 1966 ರಲ್ಲಿ ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯನ್ನು ಅಸ್ತಿತ್ವಗೊಳಿಸಿದರು.

ಈ ಸಂಘಟನೆಯನ್ನು ಕಟ್ಟಿದವರಲ್ಲಿ ಹೇನ್ಯೂಟನ್ ಪ್ರಮುಖ. ತನ್ನ ಜನರ ವಿಮೋಚನೆಯ ಬಗೆಗೆ ಅನೇಕ ಹೋರಾಟ, ಪ್ರತಿಭಟನೆಗಳನ್ನು ಮಾಡಿಸುತ್ತಿದ್ದ ಹೇ 1966ನೇ ಅಕ್ಟೋಬರ್ ತಿಂಗಳ ಒಂದು ದಿನ ತನ್ನ ಹೋರಾಟದ ಒಡನಾಡಿ ಬಾಬಿಸಿಯಾಲ್‌ಗೆ ಹೇಳಿದ "ನಮಗೆ ಕಾರ್ಯಕ್ರಮವೊಂದರ ಅಗತ್ಯವಿದೆ. ಜನತೆಗಾಗಿ ನಾವೀಗ ಕಾರ್ಯಕ್ರಮ ರೂಪಿಸಬೇಕಾಗಿದೆ. ನಾವು ರೂಪಿಸುವ ಕಾರ್ಯಕ್ರಮ ಜನರು ಅರ್ಥಮಾಡಿಕೊಳ್ಳುವಂತಿರಬೇಕು. ಅದನ್ನವರು ಓದುವಂತೆ ಮತ್ತು ನೋಡುವಂತಿರಬೇಕು. ಅಷ್ಟೇ ಅಲ್ಲ ಅದೇ ಕಾಲಕ್ಕೆ ಅದು ಅವರ ಬಯಕೆಗಳನ್ನು ಮತ್ತು ಅಗತ್ಯತೆಗಳನ್ನು ಪೂರೈಸುವಂತಿರಬೇಕು."

ಅಂದು ರಾತ್ರಿಯೇ ಅವರಿಬ್ಬರೂ ತಾವು ಕೆಲಸಮಾಡುತ್ತಿದ್ದ ಉತ್ತರ ಓಕ್‌ಲ್ಯಾಂಡ್‌ನ ಬಡ ಕೇಂದ್ರ (poverty centre)ದಲ್ಲಿ ಕುಳಿತು ರೂಪಿಸಿದ 10 ಅಂಶಗಳ ಕಾರ್ಯಕ್ರಮಗಳೇ ಈವರೆಗೂ ಬ್ಲಾಕ್ ಪ್ಯಾಂಥರ್ಸ್ ಸಂಘಟನೆಯ ಪ್ರಣಾಳಿಕೆಗೆ ಆಧಾರ.

ಪ್ರಣಾಳಿಕೆಯ ರೂಪ ಪಡೆದ ಆ ಕಾರ್ಯಕ್ರಮಗಳೆಂದರೆ 1. ನಮಗೆ ಸ್ವಾತಂತ್ರ್ಯ ಬೇಕು. ನಮ್ಮ ಕರಿಯ ಅಧಿಪತ್ಯವನ್ನು ಸ್ಥಾಪಿಸಲು ನಮಗೆ ಅಧಿಕಾರಬೇಕು.

ಈ ದೇಶದ ಕರಿಯ ಜನರು ಈ ನಾಡನ್ನು ಕಟ್ಟಿದ್ದಾರೆ. ಅನೇಕ ಬಗೆಯಲ್ಲಿ ಬಿಳಿಯ ಅಮೆರಿಕನ್ನರಂತೆ ಅವರಿಗೂ ಒಂದೇ ತೆರನಾದ ಶಾಸನಬದ್ಧ ಹಕ್ಕುಗಳಿವೆ. ಆದರೆ ಅವರ ಆರ್ಥಿಕ ಮತ್ತು ರಾಜಕೀಯ ಬದುಕು ಅವರನ್ನು ವಲಸೆ ನಾಡಿಗರನ್ನಾಗಿ ಇಟ್ಟಿದೆ.

ಕರಿಯ ಜನರು ಅಪಹರಣಕ್ಕೊಳಪಟ್ಟವರು. ಅವರನ್ನು ವಲಸಿಗರ ಸ್ಥಿತಿಯಲ್ಲೇ ನೋಡಿಕೊಳ್ಳಲಾಗುತ್ತಿದೆ ಎಂದು ಎಲ್ಡ್ರಿಜ್ ಎಂಬ ಬರಹಗಾರ ಅಭಿಪ್ರಾಯಪಡುತ್ತಾರೆ.

ಅಮೆರಿಕಕ್ಕೆ ಬರಬೇಕೆಂದು ಕರಿಯರು ಕೋರಿಕೊಂಡು ಬಂದವರಲ್ಲ. ಅವರನ್ನು ಅವರ ಸ್ವಂತ ನಾಡಿನಿಂದ (ಆಫ್ರಿಕಾ) ಅಪಹರಿಸಿ ತರಲಾಗಿದೆ ಮತ್ತು ಅಮೆರಿಕವನ್ನು ಶ್ರೀಮಂತಗೊಳಿಸಲು ಉತ್ಪಾದನಾ ಕ್ಷೇತ್ರಗಳಲ್ಲಿ ಅವರನ್ನು ಬಲವಂತವಾಗಿ ದುಡಿಸಿಕೊಳ್ಳಲಾಗುತ್ತಿದೆ. ಆದರೆ ಆ ಶ್ರೀಮಂತಿಕೆ ಅವರ ಪಾಲಿಗಿಲ್ಲ. ಆದ್ದರಿಂದ ಹೇ ನ್ಯೂಟನ್ ಸ್ವಾತಂತ್ರ್ಯ ಕುರಿತು ರಾಷ್ಟ್ರೀಯ ವಿಮೋಚನೆ ಬಗೆಗೆ ಹೇಳುವುದೆಂ
ದರೆ ಹೋರಾಟದ ಜನತೆಯು ತಮ್ಮ ಅಧಿ
ವನ್ನ ತಾವೇ ನಿರ್ಧರಿಸಿಕೊಂಡು ಅಸ್ತಿತ್ವಗೆ
ಕೊಳ್ಳುವುದಕ್ಕಾಗಿ ಸ್ವಾತಂತ್ರ್ಯಬೇಕು. ವಾ
ಗ್ಟನ್ ರಾಜಕೀಯ, ಸೇನಾ ಅಧಿಪತಿಗಳ ಪ
ದೊಡ್ಡ ದೊಡ್ಡ ವಾಣಿಜ್ಯೋದ್ಯಮಿಗಳು ಕ
ಳ್ಳುವ ತೀರ್ಮಾನಗಳಿಂದ ಕರಿಯರನ್ನು
ತ್ರಗೊಳಿಸಬೇಕು.

ಬ್ಲಾಕ್ ಪ್ಯಾಂಥರ್ಸ್ ಸಂಘಟನೆ ಜನ
ಒಂದು ಸಂಘಟನೆ ಎಂದು ಹೇಳುವ
"ದಾಸ್ಯ ಸಂಕೋಲೆಯಿಂದ ಎಲ್ಲಾ ಜನತೆ ವಿ
ರಾಗಬೇಕೆಂಬುದು ಸಂಘಟನೆಯ ಮೊ
ಉದ್ದೇಶ.

ಸ್ವಾತಂತ್ರ್ಯದ ಹಸಿವನ್ನು ಹೋರಾ
ನೀಗಿಸಿಕೊಳ್ಳುವಂತಾದರೆ ಆಗ ಕರಿಯರು
ರಿಕದ ವಿದೇಶಾಂಗ ನೀತಿ, ಅದರ ಬಂಡ
ಶಾಹಿ ಆರ್ಥಿಕ ಚೌಕಟ್ಟು, ಕಾನೂನು,
ಗಳು ಇತ್ಯಾದಿಗಳ ಬಗೆಗೆ ಪ್ರಶ್ನಿಸು
ಇದನ್ನೇ ಸ್ವಯಂ ನಿರ್ಧಾರ ಎನುವುದು. ಅ
ಜನರೇ ತಮ್ಮ ಬೇಕು-ಬೇಡಗಳನ್ನು ತಮ
ನಿರ್ಧರಿಸಿಕೊಳ್ಳುವರು.

2. ನಮ್ಮ ಜನರಿಗೆ ಸಂಪೂರ್ಣ ಉದ
ಬೇಕು.

ಕರಿಯರ ಕೇರಿಯನ್ನು ಹೊಕ್ಕಿ ನೋ
ಕೈಗಳಿಗೆ ದುಡಿಮೆ ಇಲ್ಲದೆ ದುಃಖದ ರಾ
ಪನೆಗಳಲ್ಲಿರುವ ಅನೇಕ ಜನರಲ್ಲಿ ನಿರುದ್ಯೋ
ಛಾಯೆ ಎದ್ದುಕಾಣುವುದು. ಕರಿಯರ ಶಾ
ಳಿಂದ ಬರುವ ಪದವೀಧರರಿಗಿಂತ ಉದ
ಅವಕಾಶಗಳು ಬಿಳಿಯರಿಗೆ ಹೆಚ್ಚು. ಬಿಳಿ
ಶಾಲೆಗಳ ಪದವೀಧರರನ್ನು ಉನ್ನತ ಮ
ಅರ್ಹತೆ ದೃಷ್ಟಿಯಿಂದ ಕಾಣಲಾಗುತ್ತಿದೆ.

ಕೆಲಸದ ಹಕ್ಕನ್ನು ನಿರಾಕರಿಸಿದರೆ ವ್ಯಕ್ತಿಯೊ
ಬದುಕುವ ಹಕ್ಕನ್ನೂ ನಿರಾಕರಿಸಿದಂತೆ. ಪ್ರ
ಉದ್ಯೋಗ ಪ್ರತಿಯೊಬ್ಬನ ಹಕ್ಕು.
ಹಕ್ಕನ್ನು ನೀಡುವುದು ಆ ಸಮಾಜದ ಹೊ
ಬಂಡವಾಳಶಾಹಿಗಳು ಹೊಂದಿರುವ ಕೈಗಾ
ಳಾಗಲಿ ಅಥವಾ ಅಮೆರಿಕ ಸರ್ಕಾರವ
ಇದರಿಂದ ಹೊರತಲ್ಲ. ತಮ್ಮ ಉದ

ಭಾವಿ ಹತ್ತು ಅಂಶಗಳ ಕಾರ್ಯಕ್ರಮ

ನ್ನು ಮತ್ತು ಸರ್ಕಾರವನ್ನು ಈ ಜನತೆಯು ಗೊಪ್ಪಿಸಬೇಕು.

ಾಸಗಿ ಉತ್ಪಾದನಾ ಒಡೆತನ ನಾಶವಾಗಬೇಕು. ುತ್ಪಾದಿಸುವ ಪ್ರತಿಯೊಬ್ಬನ ಹೊಟ್ಟೆ ತುಂಬ ೀಕು ಮತ್ತು ಆತ ತನ್ನ ಉತ್ಪಾದನೆಗೆ ್ಕಂತೆ ಜೀವಿಸಬೇಕು. ಆದರೆ ಬಂಡವಾಳ ಾಹಿ ಅಮೆರಿಕಾ ಸಮಾಜದಲ್ಲಿ ಉತ್ಪಾದಿಸುವ ನನಿಗೆ ತಿನ್ನುವ ಸ್ಥಿತಿ ಇಲ್ಲ. ಅವನು ಯಾವಾ ಲೂ ಬೇರೊಬ್ಬರ ಲಾಭಕ್ಕಾಗಿ ಉತ್ಪಾದನೆ ುಲ್ಲಿ ತೊಡಗುತ್ತಾನೆ. ಈ ವ್ಯವಸ್ಥೆಯೇ ಲಾವಣಿಯ ಉಗಮಕ್ಕೆ ಕಾರಣವಾಗಿರು ುದು.

ರಿಯರು ಇಂತಹ ವ್ಯವಸ್ಥೆಗೆ ಸಿಕ್ಕಿ ಈ ೀತಿಯ ಬದುಕನ್ನೇ ಅನೇಕ ವರ್ಷಗಳಿಂದ ಡೆಸಿಕೊಂಡು ಬರುತ್ತಿದ್ದಾರೆ. ಈಗ ಇದರಿಂದ ಪ್ಪಿಸಿಕೊಳ್ಳಲು ಮತ್ತು ಹೊಸ ರೀತಿಯ ಬದುಕಿ ಾಗಿ ಹೆಂಗಸರು ಮಕ್ಕಳಾದಿಯಾಗಿ ಇಡೀ

ಎಸ್. ಗಣೇಶನ್

ಿಯ ಜನಾಂಗವೇ ಹೋರಾಟ ನಡೆಸಬೇಕಾ ದೆ.

. ಬಂಡವಾಳಶಾಹಿಯು ನಮ್ಮ ಜನಾಂಗದ ುೇಲೆ ನಡೆಸಿಕೊಂಡು ಬರುತ್ತಿರುವ ದರೋಡೆ ಾನೆಗೊಳ್ಳಬೇಕು.

ಈಗ್ಗೆ ನೂರು ವರ್ಷಗಳ ಹಿಂದೆ ಅಮೆರಿಕ ಸರ್ಕಾರ ಪ್ರತಿಯೊಬ್ಬ ಕರಿಯನನ್ನು ದಾಸ್ಯ ದಿಂದ ವಿಮುಕ್ತಿಗೊಳಿಸಿ ತಲಾ 40 ಎಕರೆ ಭೂಮಿ ಮತ್ತು ಎರಡೆರಡು ಹೇಸರ ಕತ್ತೆಗಳನ್ನು ಕೊಡುವುದಾಗಿ ಅಶ್ವಾಸನೆ ನೀಡಿತು. ಆಶ್ವಾಸನೆ ಯನ್ನು ಈವರೆಗೂ ಈಡೇರಿಸಿಲ್ಲ. ಕೆಲವು ಆರ್ಥಿಕ ಸ್ಥಿತಿಯು ಬದಲಾವಣೆಗೆ ಅದನ್ನಾದರೂ ಮಾಡಬಹುದಿತ್ತು. ಆದರೆ ಬದಲಾಗಿ ಸರ್ಕಾರ ಅವರನ್ನು ಸದೆಬಡಿಯುತ್ತಿದೆ ಮತ್ತು K.K.K. ಯ ಭಯೋತ್ಪಾದನೆಯಿಂದ ಉತ್ತ ರದ ಕಡೆ ತೊಲಗುವಂತೆ ಹಾಗೂ ಯಾರು ಅವ ರನ್ನು ಶೋಷಣೆ ಮಾಡುತ್ತಿದ್ದರೋ ಅವರ ಕೈಗಾ ರಿಕೆ ಕೇಂದ್ರಗಳಲ್ಲಿ ದುಡಿಯುವಂತೆ ದಬ್ಬುತ್ತಿದೆ.

ನಮ್ಮನ್ನೆಲ್ಲ ತನ್ನ ಪಾದದಡಿಯಲ್ಲಿಟ್ಟುಕೊಂಡಿರುವ ಈ ಬಂಡವಾಳಶಾಹಿ ಪದ್ಧತಿಯು ಸಾವಿರಾರು ದುಡಿಮೆಗಾರರು ಉತ್ಪಾದಿಸಿದ ಸಂಪತ್ತಿನಿಂದ ಬೆಳೆದಿದೆ. ನಾವು ಉತ್ಪಾದಿಸಿದ ಸಂಪತ್ತಿನಿಂದ ಬರುವ ಶ್ರೀಮಂತಿಕೆ ಇತರ ಆಸ್ತಿಪಾಸ್ತಿ ನಮಗೆ ಸೇರುವ ಬದಲು ಒಡೆಯನ ಪಾಲಾಗುತ್ತಿದೆ. ನಮ್ಮ ಕೈಗಳಿಂದ ದುಡಿದು ಸಂಪಾದಿಸಿದ ಹಣವೆಲ್ಲ ವಾಣಿಜ್ಯೋದ್ಯಮಿಗಳ ಜೇಬು ಸೇರುತ್ತಿದೆ.

ಪ್ರತಿದಿನವೂ ಹೀಗೆ ಕರಿಯರ ಶ್ರಮದ ಹಣವನ್ನು ವಾಣಿಜ್ಯೋದ್ಯಮಿಗಳು ತುಂಬಿಕೊಳ್ಳುತ್ತಿದ್ದು "ನಾವೇನೂ ನಿಮ್ಮ ಹಣವನ್ನು ಇಟ್ಟುಕೊಳ್ಳುತ್ತಿಲ್ಲ. ತೆರಿಗೆಗಳನ್ನು ಕೊಡುತ್ತಿದ್ದೇವೆ ಮತ್ತು ನಾವು ನೀಡುವ ತೆರಿಗೆ ಹಣ ಕರಿಯರಿಗೆ ವಾಪಸ್ಸಾಗುತ್ತಿದೆ" ಎನ್ನುತ್ತಿದ್ದಾರೆ.

ಅವರಿಂದ ಸರ್ಕಾರ ಪಡೆಯುವ ತೆರಿಗೆ ಹಣವನ್ನು ಕರಿಯರಿಗಾಗಿ ಮೂರು ದಿಕ್ಕಿನಲ್ಲಿ ಹರಿಯಬಿಡಲಾಗಿದೆ. 1. ಪೋಲೀಸ್, 2. ಕಲ್ಯಾಣ ಕಾರ್ಯ, 3. ಶಾಲೆಕಾಲೇಜು.

ಬಿಳಿಯರ ಮತ್ತು ಬಂಡವಾಳಶಾಹಿಗಳ ಆಸ್ತಿ–ಪಾಸ್ತಿ ರಕ್ಷಣೆಗೆಂದು ಕರಿಯರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪೋಲೀಸರನ್ನು ನಮ್ಮ ಬಳಿ ಇಡಲಾಗಿದೆ. ಇನ್ನು ಕಲ್ಯಾಣಕಾರ್ಯ ನಾವಿರುವ ಸ್ಥಿತಿಯೇ ಅದಕ್ಕೆ ಉತ್ತರ. ನಿರುದ್ಯೋಗವಂತು ದಟ್ಟವಾಗಿ ನಮ್ಮನ್ನು ಆವರಿಸಿದೆ. ಶಾಲೆಗಳ ಬಗ್ಗೆಯಂತು ಎಷ್ಟು ಹೇಳುವುದಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಪ್ರತಿಯೊಂದು ನಗರಗಳ ನಮ್ಮ ಕೇರಿಗಳಲ್ಲಿರುವ ಶಾಲೆಗಳ ಸ್ಥಿತಿ ಹೀನಾಯ ಸ್ಥಿತಿಯಲ್ಲಿವೆ. ಹೀಗೆ ನಿಮ್ಮ ಉದ್ಧಾರಕ್ಕೆ ಹಣ ಖರ್ಚು ಮಾಡಲಾಗುತ್ತಿದೆ ಎಂದು ಸರ್ಕಾರ ಬಡಾಯಿಕೊಚ್ಚಿಕೊಳ್ಳುತ್ತಿದೆ.

ಇವೆಲ್ಲ ಅನ್ಯಾಯಗಳ ಬಗ್ಗೆ ಕೇಳಲು ಹೋದಾಗ ಸಮಾಜದ ಆಧಾರಸ್ತಂಭಗಳೆನಿಸಿಕೊಂಡ 'ಗೌರವಾನ್ವಿತ' ವ್ಯಕ್ತಿಗಳು ನಿತ್ಯವೂ ನಮ್ಮ ಮೇಲೆಯೇ ಎದುರು ಬೀಳುವುದಲ್ಲದೆ ಕಾನೂನು ಮತ್ತು ಶಿಸ್ತು ಹಾಳಾಗಿದೆ ಎಂದು ಬಡಕೊಳ್ಳುವರು.

4. ಮನುಷ್ಯರು ಬದುಕಲು ಯೋಗ್ಯವಿರುವಂತಹ, ನೆಮ್ಮದಿಯಿಂದಿರುವಂತಹ ವಸತಿ ನಮಗೆ ಬೇಕು.

ಕೊಳೆಗೇರಿಗಳನ್ನು ಭೂಮಾಲೀಕರು ಸೃಷ್ಟಿಸಿದ್ದಾರೆಯೇ ಹೊರತು ಅಲ್ಲಿನ ನಿವಾಸಿಗಳಲ್ಲ. ಉದಾ : ನ್ಯೂಯಾರ್ಕ್ ನಗರದಲ್ಲಿ ಕೊಳಗೇರಿದಾದಾ ಒಬ್ಬ ಬಹಳ ಲಾಭದಾಯಕ ವ್ಯಾಪಾರಿ. ಕೊಳೆಗೇರಿಯ ಮನೆಗಳು-ಅಂಗಡಿಗಳ ಒಡೆಯನಾಗಿರುವ ಆತ ಅನೇಕ ವರ್ಷಗಳಿಗೊಮ್ಮೆಯಾದರೂ ಅವುಗಳನ್ನು ರಿಪೇರಿ ಮಾಡಿಸುವುದಿಲ್ಲ. ಕಾಲಕ್ಕೆ ಸರಿಯಾಗಿ ಮಾತ್ರ ತಪ್ಪದೆ ಬಾಕಿ ವಸೂಲಿ ಮಾಡುತ್ತಾನೆ. ಒಂದೆರಡು ದಿನ ತಡವಾದರೂ ದಂಡ ವಿಧಿಸುತ್ತಾನೆ, ದಬ್ಬಾಳಿಕೆ ನಡೆಸುತ್ತಾನೆ.

ಮನೆ ವಾಸಕ್ಕಾಗಿರಬೇಕೆ ವಿನಹ ಹಣಗಳಿಸುವ ಸ್ವತ್ತಾಗಬಾರದು. ಭೂಮಿ ಮತ್ತು ಮನೆಗಳು ಯಾರೊಬ್ಬರ ಖಾಸಗಿ ಸ್ವತ್ತಾಗಲು ಕಾರಣವೇ ಇಲ್ಲ.

ನಮಗೆ ಮನೆ ಬೇಕಾಗಿರುವುದು ಮಲಗಲಿಕ್ಕೆ, ಪ್ರೀತಿಸಲಿಕ್ಕೆ, ಮಕ್ಕಳನ್ನು ಬೆಳಸಲಿಕ್ಕೆ ಮತ್ತು ಸಾಯಲಿಕ್ಕೆ. ನಮಗಿಂತ ಗುಹೆ ಒಳಗೆ ಜೀವಿಸುವವ ಎಷ್ಟೋ ಉತ್ತಮ. ಬಾಡಿಗೆಯನ್ನೇನನ್ನು ಆತ ತೆರಬೇಕಾಗಿಲ್ಲ. ಭಯದಿಂದ ಇರಬಹುದೋನೋ, ಆದರೆ ಮನೆ ಮಾಲೀಕ ಬಾಡಿಗೆ ಹೆಚ್ಚಿಸುವ ಭಯವಾಗಲಿ, ಮನೆಯಿಂದ ಹೊರಕ್ಕೆ ಒದ್ದುಹಾಕುವ ಭಯವಾಗಲಿ ಇಲ್ಲ. ನಾವು ರಕ್ಷಣೆಯಿಲ್ಲದೆ ಇದ್ದೇವೆ ಎನ್ನುಕೊಳ್ಳುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಬಂಡವಾಳಶಾಹಿ ನೆರಳಲ್ಲಿ ಮಾನವರು ಜೀವಿಸಲು ಯೋಗ್ಯವಾದ ವಾತಾವರಣ ಇರುವುದಿಲ್ಲ.

5. ಅವನತಿಯತ್ತ ಮುಖಮಾಡಿರುವ ಈ ಅಮೆರಿಕಾ ಸಮಾಜದ ಸತ್ಯಸಂಗತಿಯನ್ನು ಹೊರಗೆಡಹಲು ಮತ್ತು ಈಗಿನ ವ್ಯವಸ್ಥೆಯಲ್ಲಿ ನಮ್ಮ ಪಾತ್ರ ಏನೆಂಬುದನ್ನು ಹಾಗೂ ನಮ್ಮ ನಿಜವಾದ ಇತಿಹಾಸವನ್ನು ನಮ್ಮ ಜನರಿಗೆ ಹೇಳಲು ನಮಗೆ ಶಿಕ್ಷಣಬೇಕು.

(6ನೇ ಪುಟ ನೋಡಿ)

ಬ್ಲ್ಯಾಕ್ ಪ್ಯಾಂಥರ್ಸ್: ಹತ್ತು ಅಂಶಗಳ ಕಾರ್ಯಕ್ರಮ

(ಮಧ್ಯದ ಪುಟದಿಂದ)

ಸಮಾಜವೊಂದು ಅವನತಿಯತ್ತ ಕಾಲಿಟ್ಟಿದ್ದರೂ, ಅದು ತಾನೆಷ್ಟು ಶ್ರೇಷ್ಠ ಎಂಬ ಬಗ್ಗೆ ಎಷ್ಟು ಸುಳ್ಳು ಹಬ್ಬಿಸಿದೆ? ಅದೆಷ್ಟು ಮಹತ್ವವಾದದ್ದು ಮತ್ತು ಅದರ ಭವಿಷ್ಯ ಎಷ್ಟರಮಟ್ಟಿಗೆ ತಾನೆ ಉತ್ತಮವಾದದ್ದು? ಈ ಸುಳ್ಳುಗಳ ಆಧಾರದ ಮೇಲೆ 'ಸಂಪ್ರದಾಯ'ದ ಹೆಸರಿನಲ್ಲಿ ಶಾಲೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ನಾವೇನೂ ಯೋಚಿಸುತ್ತಿದ್ದೇವೆಯೋ ಅದನ್ನೇ ಆ ಶಾಲೆಗಳ ಆಡಳಿತ ವರ್ಗಗಳು ಹೇಳುತ್ತಿವೆ. ಹೀಗೆ ಹೇಳುವ ಹಿಂದೆ ಇರುವ ಕಾರಣಗಳೆಂದರೆ ಅವರಂತೆ ನಾವು ಆಗಬೇಕೆಂಬ ಇಚ್ಛೆ. ಅವರಂತೆ ನಾವೂ ಬಟ್ಟೆ ಧರಿಸುವುದು ತಲೆಬಾಚಿಕೊಳ್ಳುವುದು ಮತ್ತಿತರ ನಿಯಮಗಳನ್ನು ಅನುಸರಿಸುವ ಮೂಲಕ ನಮ್ಮನ್ನು ತಮ್ಮ ದಾರಿಗೆಳೆದುಕೊಳ್ಳುವುದು. ಇದೇನು ನಮಗೆ ಅವಕಾಶವಲ್ಲ. ನಮ್ಮ ವ್ಯಕ್ತಿತ್ವ, ಸ್ವಂತಿಕೆ ಮತ್ತು ನಮ್ಮ ಜನರ ಬಗ್ಗೆ ಅರಿವಿದೆ. ನಾವೂ ಎಲ್ಲರಂತೆಯೇ ಎಂಬ ರೀತಿಯಲ್ಲೇ ಶಿಕ್ಷಣ ಪದ್ಧತಿ ಇದೆಯೇ? ನಾವು ತಿಳಿದಿರುವಂತೆ ಅನುಭವಿಸುತ್ತಿರುವಂತೆ ಸಮಾಜದಲ್ಲಿ ತೀರಾ ವಿರೋಧವಾದ ನಡವಳಿಕೆ ಇದೆ. ಅನೇಕ ವೈರುಧ್ಯಗಳಿವೆ.

ನಮ್ಮ ಜನಾಂಗದ ಶಿಕ್ಷಕರು ನಮಗೆ ಪಾಠ ಹೇಳಿಕೊಡುವುದನ್ನು ದಕ್ಷಿಣದಲ್ಲಿ ತಡೆಗಟ್ಟಲಾಗುತ್ತಿದೆ. ಮತ್ತೆ ನಾವೇಗೆ ಇಂಗ್ಲೀಷ್ ಕಲಿಯುವುದು? ಈ ದೇಶದ ಚರಿತ್ರೆಯ ಸತ್ಯವನ್ನು ಮರೆಮಾಚಲು ಹಾಗೆ ಮಾಡಲಾಗುತ್ತಿದೆ. ನಮ್ಮ ಇತಿಹಾಸ ನಮಗೆ ಗೊತ್ತಾಗಬಾರದೆಂದು ಮಾಡುವ ಯತ್ನಗಳಿವು.

ನಮ್ಮ ವೈರಿಗಳು ನಮ್ಮ ಶಿಕ್ಷಣದಲ್ಲಿ ಅಳವಡಿಸಿರುವ ಸಿದ್ಧಾಂತಗಳನ್ನು ಬದಲಿಸಿ ಕರಿಯರ ಅಧ್ಯಯನಕ್ಕೆ ಕ್ರಾಂತಿಕಾರಕ ತತ್ವಗಳನ್ನು ಅಧ್ಯಯನದ ಒಂದು ಭಾಗವಾಗಿ ರೂಪಿಸುವಂತೆ ಹೋರಾಡಬೇಕಾಗಿದೆ. ನಾವು ಬಯಸುವ ಜ್ಞಾನ ಮತ್ತು ನಮ್ಮ ಚರಿತ್ರೆಯೊಡನೆ ಶಾಲೆಗಳ ಆಡಳಿತ ನಮ್ಮದಾಗಬೇಕು.

6. ಮಿಲಿಟರಿ ಸೇವೆಯಿಂದ ಎಲ್ಲಾ ಕರಿಯ ಸೈನಿಕರನ್ನು ವಿಮುಕ್ತರನ್ನಾಗಿ ಮಾಡಬೇಕು.

ನಮ್ಮ ಜನ ತೃತೀಯ ಜಗತ್ತಿನ ಒಂದು ಭಾಗ ಎಂದು ಬ್ಲ್ಯಾಕ್ ಪ್ಯಾಂಥರ್ಸ್ ಪರಿಗಣಿಸುವುದು. ಅಮೆರಿಕ ತನ್ನ ವಿಮಾನಗಳು, ಬಾಂಬುಗಳು, ಬಂಡವಾಳ ಹೂಡಿಕೆ, ಸಿ.ಐ.ಎ. ಏಜೆಂಟರುಗಳ ನೇಮಕದ ಮೂಲಕ ದರೋಡೆ, ಹತ್ಯೆಗಳನ್ನು ಮಾಡಿಸುವುದು. ಮುಖ್ಯವಾಗಿ ತನ್ನ ರಾಜತಾಂತ್ರಿಕರ ಮುಖೇನ ಹಾಗೂ ಸೇನೆ ಪಡೆಯಿಂದ ತೃತೀಯ ಜಗತ್ತನ್ನು ಹತೋಟಿಯಲ್ಲಿಟ್ಟುಕೊಳ್ಳಲು ನೋಡುತ್ತಿದೆ.

ಅಮೆರಿಕದಿಂದ ತುಳಿತಕ್ಕೊಳಪಟ್ಟ ವಿಶ್ವದ ಜನರು ಅದರ ಆರ್ಥಿಕ ಹತೋಟಿ ಮತ್ತದರ ಕೈಗೊಂಬೆ ಸರ್ಕಾರಗಳ ವಿರುದ್ಧ ಸೊಲ್ಲೆತ್ತಿದ್ದಾರೆ.

ಅಮೆರಿಕದೊಳಗೆ ತುಳಿತಕೊಳ್ಳಪಟ್ಟವರ ಮಿತ್ರರಾಗಿರುವ ವಿಯಟ್ನಾಮಿಯರನ್ನು ದಮನ ಮಾಡಲು ಅಮೆರಿಕ ತನ್ನ ಸೇನೆಯನ್ನು ಧಾರಾಳವಾಗಿ ಬಳಸುತ್ತಿದೆ.

ವಿಯಟ್ನಾಂ ಇದನ್ನು ಅರ್ಥಮಾಡಿಕೊಂಡಿದೆ. ಇತ್ತೀಚೆಗೆ ನಡೆದ ಅದರ ಕ್ರಾಂತಿಕಾರಿ ಸಂಘಟನೆ 'ರಾಷ್ಟ್ರೀಯ ವಿಮೋಚನಾ ರಂಗ'ದ ಸಭೆಯು "ಅಮೆರಿಕದಲ್ಲಿನ ಕರಿಯ ಜನರನ್ನು ವಿಯಟ್ನಾಂ ಯಾವಾಗಲೂ ತನ್ನ ಅಮೆರಿಕದ ಸಹೋದರರನ್ನಾಗಿಯೂ ಮತ್ತು ತನಗೂ ವೈರಿಯಾಗಿರುವ ಅಮೆರಿಕದ ಸಾಮ್ರಾಜ್ಯಶಾಹಿ ಶಕ್ತಿ ವಿರುದ್ಧದ ಹೋರಾಟದಲ್ಲಿ ಕಾಮ್ರೇಡುಗಳನ್ನಾಗಿ ಕಾಣುವುದು" ಎಂದು ಸ್ಪಷ್ಟಪಡಿಸಿದೆ.

7 ಕರಿಯ ಜನರ ಮೇಲೆ ಪೋಲೀಸರು ನಡೆಸುತ್ತಿರುವ ಅಮಾನುಷ ದೌರ್ಜನ್ಯ ಮತ್ತು ಕೊಲೆ ಈ ಕೂಡಲೇ ಕೊನೆಗೊಳ್ಳಬೇಕು.

ಪೋಲೀಸರು ಸಮವಸ್ತ್ರದಲ್ಲಿದ್ದರೂ ಸಾಮಾನ್ಯ ಜನದಂತೆ ವರ್ತಿಸಬೇಕು ಜನತೆ ಮತ್ತು ಪೋಲೀಸ್ ನಡುವೆ ಒಮ್ಮೆ ಪ್ರತ್ಯೇಕತೆ ಏರ್ಪಟ್ಟರೆ ಪೋಲೀಸರು ಕೂಡಲೇ ಜನವಿರೋಧಿಗಳಾಗಿ ಬಿಡುತ್ತಾರೆ. ಪೋಲೀಸ್ ಜನತೆಯ ಹಿತಕ್ಕಾಗಿ ಶ್ರಮಿಸಬೇಕು. ಯಾವಾಗ ಈ ತತ್ವ ಮೂಲೆಗುಂಪಾಗುವುದೋ ಆಗ ಪೋಲೀಸರು ಜನತೆಯ ವಿರುದ್ಧ ಬಂದೂಕಗಳನ್ನು ಕೈಗೆತ್ತಿಕೊಳ್ಳುವರು.

ಅಮೆರಿಕ ಸೇನೆ ವಿಯಟ್ನಾಂನ್ನು ಆಕ್ರಮಿಕೊಂಡಂತೆ. ಇಲ್ಲಿ ನಮ್ಮ ಕೇರಿಗಳಲ್ಲಿ ಪೋಲೀಸ್ ಕಾವಲಾಕಲಾಗಿದೆ. ಬಡಜನತೆ ತಮ್ಮ ಮೇಲಿನ ಅನ್ಯಾಯಗಳ ವಿರುದ್ಧ ಬಂಡೇಳುವುದನ್ನು ನಿಗ್ರಹಿಸಿ ಶ್ರೀಮಂತರನ್ನು, ಮತ್ತವರ ಆಸ್ತಿಪಾಸ್ತಿಗಳನ್ನು ರಕ್ಷಿಸಲು ಹೀಗೆ ಮಾಡಲಾಗಿದೆ. ರಾಕೆಫೆಲರ್ಸ್‌ರವರ ಜನಾಂಗದ ಬೀದಿಗಳಲ್ಲಿ ಹೀಗೆ ಪೋಲೀಸರು ಗಸ್ತು ಹಾಕುವುದನ್ನು ಕಾಣಲಾಗದು. ಅಮೆರಿಕದಲ್ಲಿ ಕರಿಯ ಜನರು ಸೆಟೆದು ನಿಲ್ಲದಂತೆ ಪೋಲೀಸರೆ ನೇರ ಬೆದರಿಕೆ ಒಡ್ಡುತ್ತಿದ್ದಾರೆ. ಈ ಜನರೊಡನೇ ನಮ್ಮ ಸಮರ ಎಂದು ಪೋಲೀಸರು ಭಾವಿಸಿದಂತಿದೆ. ನಾವು ಮಿಲಿಟರಿ ನೆಲೆಗಳಲ್ಲಿ ಮತ್ತು ಇನ್ನಿತರ ಕಡೆ ಪ್ರದರ್ಶನ, ಪಿಕೆಟಿಂಗ್ ನಡೆಸಿದ ಸಂದರ್ಭಗಳಲ್ಲಿ ಅವರು ಹಾಗೆ ನಡೆದುಕೊಂಡಿರುವರು

8. ದೇಶದ ವಿವಿಧ ಜೈಲುಗಳಲ್ಲಿ ಇಡಲಾಗಿರುವ ಕರಿಯರನ್ನು ಬಿಡುಗಡೆಗೊಳಿಸಬೇಕು.

ಡೋಪ್ ಸೇದುದಕ್ಕಾಗಿ, ಸಂಚಾರಿ ಟಿಕೆಟ್‌ಗಳನ್ನು ಹೊಂದದಿದ್ದುದಕ್ಕೆ ಅಥವಾ ನಿಷಿದ್ಧ ಪ್ರದೇಶಗಳಲ್ಲಿ ಸಂಚಾರ ಮಾಡಿದಂತಹ ಸಣ್ಣಪುಟ್ಟ ಕಾರಣಗಳಿಗಾಗಿ ಬಹುತೇಕ ಮಂದಿಯನ್ನು ಸೆರೆಯಲ್ಲಿಡಲಾಗಿದೆ. ಮಹಿಳಾ ಜೈಲುಗಳನ್ನು ನೋಡಿದಾಗ ಇದು ಸ್ಪಷ್ಟವಾಗಿ ಗೊತ್ತಾಗುವುದು ನಮ್ಮ ಹೆಂಗಸರ ಬಗ್ಗೆ ಈ ಸಮಾಜ ಲೈಂಗಿಕ ದೃಷ್ಟಿಯಿಂದ ನೋಡುತ್ತಿದೆ. ಮಹಿಳೆಯರ ಪರಿಪತ್ತುಗಳನ್ನು ವೇಶ್ಯಾವಾಟಿಕೆಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಎಲ್ಲಾ ಮಹಿಳಾ ಸೆರೆಯಾಳುಗಳು ಈ ಸಮಾಜದ ಹೀನ ಕೃತ್ಯಗಳಿಗೆ ಬಲಿಪಶುಗಳಾಗಿದ್ದಾರೆ.

ಹಾಗೆಯೆ ಎಲ್ಲ ಕರಿಯ ಸೆರೆಯಾಳುಗಳೂ ಕೂಡ ರಾಜಕೀಯ ಕೈದಿಗಳು. ತಮ್ಮ ಉಳುವಿಕೆಗಾಗಿ ಹೋರಾಟದ ದನಿ ಎತ್ತಿದವರನ್ನೆಲ್ಲ ತಂದು ಕೂಡಲಾಗಿದೆ. ಇವರೆಲ್ಲ ನಿಜವಾದ ಅಪರಾಧಿಗಳಲ್ಲ.

ಸಾನ್ ಫ್ರಾನ್ಸಿಸ್ಕೋ ಯೋಧ ಮೈಕೇಲ್ ಓಬ್ರಿನ್ "ನಿಗ್ಗರ್ ಒಬ್ಬನನ್ನು ಕೊಂದು ರುಚಿ ನೋಡಬೇಕು" ಎಂದು ಹೇಳಿ ಜಾರ್ಜ್ ಬಾಸ್ಕೆಟ್‌ರನ್ನು ಅಮಾನುಷವಾಗಿ ಗುಂಡಿಟ್ಟುಕೊಂದ. ದುಡಿಯುವ ಲಕ್ಷಾಂತರ ಜನರನ್ನು ದರೋಡೆ ಮಾಡುವಂತೆ ಜನರಲ್ ಎಲೆಕ್ಟ್ರಾನಿಕ್ಸ್ ಆಡಳಿತಾಧಿಕಾರಿಗಳು ಆಯುಧ-ಸಲಕರಣೆಗಳನ್ನು ನೀಡಿ ಇಂತಿಷ್ಟು ಎಂದು ಬೆಲೆಯನ್ನೇ ನಿಗದಿಪಡಿಸಿದ್ದರು. ಇಲಿನಾಯ್ಸ್ ಸ್ಟೇಟ್ ಅಟಾರ್ನಿ ಎಡ್ವರ್ಡ್ ಹೇರಾಹ್ಯಾಂ ನಮ್ಮ ಒಡನಾಡಿ ಫ್ರೆಡ್ ಹ್ಯಾಂಪ್ಟನ್‌ರನ್ನು ಕೊಲ್ಲಲು ಆಜ್ಞೆ ಮಾಡಿದ. ಇಂತಹ ಸಹಸ್ರಾರು ಕೊಲೆ ಪಾತಕಿಗಳು ಸಮಾಜದಲ್ಲಿ ಸ್ವತಂತ್ರರಾಗಿ ತಿರುಗುತ್ತಿದ್ದಾರೆ. ಇವರನ್ನು ಬಂಧಿಸುವ ಯತ್ನವನ್ನು ಯಾರೂ ಮಾಡಲಿಲ್ಲ. ಯಾವುದೇ ಒಂದು ಗ್ಯಾಸ್ ಸ್ಟೇಷನ್‌ಗಿಂತ

(ಪಕ್ಕದ ಪುಟದಿಂದ)

ಇಂತಹವರು ನಮ್ಮ ಜೀವಕ್ಕೆ ಹೆಚ್ಚು ಭಯ ವೊಡ್ಡಿರುವ ಅಪಾಯಕಾರಿಗಳು.

9. ಶ್ರೀಮಂತ ವರ್ಗದ ನ್ಯಾಯಾಧೀಶರಿಂದ ಕರಿಯರ ವಿಚಾರಣೆ ನಡೆಯುವುದು ನಿಲ್ಲಬೇಕು.

ಕರಿಯ ಸೆರೆಯಾಳುಗಳನ್ನು ಕರಿಯರೇ ವಿಚಾರಣೆ ನಡೆಸಬೇಕು. ನಮ್ಮನ್ನು ರಕ್ಷಿಸುವಲ್ಲಿ ಕಾನೂನು ವಿಫಲಗೊಂಡಿದೆ. ಕರಿಯನೊಬ್ಬನನ್ನಾಗಲಿ ಅಥವಾ ಬಡವನನ್ನೊಬ್ಬನನ್ನಾಗಲಿ ಸೈನಿಕರು ಗುಂಡಿಟ್ಟು ಕೊಂದಮೇಲೆ ಇನ್ನು ನಮಗಲ್ಲಿಯ ರಕ್ಷಣೆ ? ಅಮೇರಿಕದ ಕಾನೂನು, ಕಾಯಿದೆಗಳು ಶ್ರೀಮಂತರ ಹಿತ ಕಾಯುತ್ತಿವೆ. ಕಾನೂನು ಕಟ್ಟಳೆಗಳೆಲ್ಲ ವಾಣಿಜ್ಯೋದ್ಯಮಿಗಳನ್ನು ರಕ್ಷಿಸುವತ್ತ ಕ್ರಾಂತಿಕಾರಕ ಚಳುವಳಿಗಳನ್ನು ಹತ್ತಿಕ್ಕುತ್ತಿವೆ. ಹೀಗಿರುವಾಗ ನಾವು ಸರ್ಕಾರದ ಕಾನೂನು ವ್ಯವಸ್ಥೆ ಬಗ್ಗೆ ವಿಶ್ವಾಸ ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಆದರೂ ಕಾನೂನಿಗೆ ವಿಧೇಯತೆ ತೋರಬೇಕೆಂದು ಬಲವಾದ ಸೇನಾ ಪ್ರಯೋಗ ಮಾಡಲಾಗುತ್ತಿದೆ. ನಾವೀಗ ಅದಕ್ಕೆ ವಿಧೇಯರಾಗಬೇಕಾದ ಅಗತ್ಯವೇ ಕಂಡು ಬರುವುದಿಲ್ಲ.

ಸೆರೆಯಾಳುಗಳಾಗಿರುವ ದುಡಿಯುವ ಜನರ ವಿಚಾರಣೆ ಶ್ರೀಮಂತ ವರ್ಗದ ನ್ಯಾಯಾಧೀಶರಿಂದ ತಪ್ಪಿ ದುಡಿಯುವ ಜನರಿಂದಲೇ ನಡೆಯಬೇಕು. ಶ್ರೀಮಂತರ ವಿಚಾರಣೆಯನ್ನು ದುಡಿಯುವ ವರ್ಗ ಮಾಡಬೇಕು. ಇದೇ ನಿಜವಾದ ನ್ಯಾಯ, ಏಕೆಂದರೆ ಈ ರಾಷ್ಟ್ರವನ್ನು ಕಟ್ಟಿ, ಬೆಳಸಿಕೊಂಡು ಬರುತ್ತಿರುವವರು ದುಡಿಯುವ ಜನರೆ. ಆದ್ದರಿಂದಲೇ ಅವರಿಂದಲೇ ಶ್ರೀಮಂತರ ವಿಚಾರಣೆ ನಡೆದರೆ ನಿಜವಾದ ನ್ಯಾಯ ಸಿಗುವುದು. ಈ ಅಂಶವನ್ನು ಎಲ್ಲ ಶ್ರೀಮಂತ ವರ್ಗ ಮತ್ತು ಅಧಿಕಾರಿಶಾಹಿಗಳು 'ಅಗದು' ಎಂದಿದ್ದಾರೆ. ಈಗ ಕಾನೂನು ಕದೀಮರ ಕೈಯಲ್ಲಿದೆ ಎಂಬ ವಿಚಾರ ಎಲ್ಲರಿಗೂ ಕಾಣುತ್ತಿರುವ ಅವಂಶನ್ನು ನಾವು ಗಮನಿಸಿ, ಹೆಜ್ಜೆ ಇಡಬೇಕು.

10. ನಮಗೆ ಭೂಮಿ, ಅನ್ನ, ವಸತಿ, ಶಿಕ್ಷಣ, ಬಟ್ಟೆ, ನ್ಯಾಯ ಮತ್ತು ಶಾಂತಿ ಬೇಕು,

ಇವು ನಮ್ಮ ಪ್ರಮುಖ ರಾಜಕೀಯ ಹಾಗೂ ಆರ್ಥಿಕ ಅಂಶಗಳು. ಬೇಕೆಂದಾಗ ಬೇಕಾದ ವಿಚಾರಗಳಿಗೆ ಜನಾಭಿಪ್ರಾಯ ಸಂಗ್ರಹಿಸಿ ಅವುಗಳಿಗೆ ಮಾನ್ಯತೆ ನೀಡುವ ಅಮೆರಿಕ ಸರ್ಕಾರ ಕರಿಯ ಜನರ ಬೇಡಿಕೆಗಳಿಗೂ ತನ್ನ ರಾಷ್ಟ್ರೀಯ ಘನತೆಗಾಗಿ ಮನ್ನಣೆ ಕೊಡಬೇಕು.

ಜಿಂಬಾಬ್ವೆಗೆ ಕರಿಯರ ಆಳ್ವಿಕೆ

ಜಿಂಬಾಬ್ವೆ (ರೋಡೇಷಿಯಾ ಬಹುಸಂಖ್ಯಾತ ಕರಿಯರ ನೆಲೆ) ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಈಗ ಅದು ವಿಮುಕ್ತಿ. ಕರಿಯರದೆ ಆಳ್ವಿಕೆ ಆರಂಭ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆ ವಿರುದ್ಧ ಕರಿಯರು 1890 ರಲ್ಲಿ ವಿಧ್ಯುಕ್ತವಾಗಿ ಸ್ವಾತಂತ್ರ್ಯ ಸಮರ ಸಾರಿದರು.

ಈ ಸಮರ ಕಳೆದ 25 ವರ್ಷಗಳಿಂದ ಎಡ ರಾಜಕೀಯ ಚಳವಳಿಯಾಗಿ ರೂಪ ಪಡೆಯಿತು. ಚುನಾವಣೆ ಮೂಲಕ ಈಗ ಅದ್ಭುತ ಗೆಲುವು ಸಾಧಿಸಿ ಅಧಿಕಾರಕ್ಕೆ ಬಂದಿರುವ ಕ್ರಾಂತಿಕಾರಿ ರಾಬರ್ಟ್ ಗೇಬ್ರಿಯಲ್ ಮುಗಾಬೆ ಮತ್ತು ಜೋಷುವಾ ಎನ್‌ಕೋಮು ನಾಯಕತ್ವದಲ್ಲಿ ದೇಶ ಪ್ರೇಮಿ ರಂಗ (patriotic front)ದಿಂದ ಸಶಸ್ತ್ರ ಹೋರಾಟ ಆರಂಭ.

ಈ ಗೆರಿಲ್ಲಾ ಹೋರಾಟದಲ್ಲಿ ದೇಶ ಪ್ರೇಮಿ ರಂಗದ 9200 ಮಂದಿ ಮತ್ತು ನೆರೆ ರಾಷ್ಟ್ರಗಳ ನೆಲೆಯಲ್ಲಿ 3000 ಜನರು ಕೊಲ್ಲಲ್ಪಟ್ಟರು. ಇದರ ಜೊತೆಗೆ 1800 ಮಂದಿ ರಾಷ್ಟ್ರೀಯ ವಿರೋಧಿ ಶಕ್ತಿಗಳು ಕೊಲೆಯಾದರು. ಇಡೀ ಹೋರಾಟದಲ್ಲಿ ಜೀವತೆತ್ತವರ ಸಂಖ್ಯೆ ಒಟ್ಟು 20,000 ಇದರಲ್ಲಿ ಬಿಳಿಯರು 435 ಮಂದಿ.

ಸುಮಾರು 50 ವರ್ಷಗಳ ಹೋರಾಟದಲ್ಲಿ ಆದಿವಾಸಿಗಳು ಮತ್ತು ಪ್ರಾದೇಶಿಕ ಜನರ ಐಕ್ಯಹೋರಾಟದಲ್ಲಿ ಕಾಲಾನಂತರ ಒಡಕು ಉಂಟಾಗಿ 12ಕ್ಕೂ ಹೆಚ್ಚು ಗುಂಪುಗಳಾದವು. ಹೋಳಾದ ಗುಂಪುಗಳಲ್ಲಿ ಮುಗಾಬೆ ನೇತೃತ್ವದ ಜಿಂಬಾಬ್ವೆ ಆಫ್ರಿಕನ್ ರಾಷ್ಟ್ರೀಯ ಸಂಘ (ZANU) 'ಜಾನು' ಮತ್ತು ಜೋಷುವಾ ಎನ್‌ಕೋಮು ನೇತೃತ್ವದ ಜಿಂಬಾಬ್ವೆ ಆಫ್ರಿಕನ್ ಜನತಾ ಸಂಘ (ZAPU) 'ಜಾಪು' ಎಡರಂಗ ಚಳವಳಿಯಾಗಿ ಬೇರುಬಿಟ್ಟವು.

ಇಂತಹ ಮೂಲಭೂತ ಅಂಶಗಳಿಗಾಗಿ ನಮ್ಮಂತಹ ಜನರ ಹೋರಾಟ ಪ್ರಪಂಚದ ಅನೇಕ ಕಡೆ ನಡೆಯುತ್ತಲೇ ಇದೆ. ಈ ಬೇಡಿಕೆಯನ್ನು ನಿರಾಕರಿಸುವುದಾದರೆ ನಾವೇ ನಮ್ಮ ಸ್ವಾತಂತ್ರ್ಯವನ್ನು ಪ್ರತ್ಯೇಕವಾಗಿ ಘೋಷಿಸಿಕೊಳ್ಳಬೇಕಾಗುವುದು.

ಆಧಾರ :
ಆಲ್ ಸೋಷಿಯಲ್ ಮೂವ್‌ಮೆಂಟ್ಸ್

ಮುಗಾಬೆ ಮಾರ್ಕ್ಸ್ ವಿಚಾರಧಾರೆಯಿಂದ ಪ್ರಭಾವಿತ. ಬಹುಸಂಖ್ಯಾತ ಕರಿಯರನ್ನು ಕರಿಯರೇ ಆಳಬೇಕೆಂಬ ಬಲವಾದ ಆಸೆಯನ್ನು ತನ್ನ ಹೋರಾಟದಲ್ಲಿ ಐಕ್ಯಗೊಳಿಸಿದ.

ಕಡುಬಡ ಕುಟುಂಬದಲ್ಲಿ ಹುಟ್ಟಿದ ಮುಗಾಬೆ ತನ್ನ ಬಹುಸಂಖ್ಯಾತ ಕರಿಯ ಜನರ ವಿಮೋಚನೆಗಾಗಿ ಎಳೆತನದಲ್ಲೇ ಕ್ರಾಂತಿಕಾರಿ ಚಳವಳಿಗೆ ಧುಮುಕಿದ. ಸುಮಾರು 20 ವರ್ಷ ಗೆರಿಲ್ಲಾ ಹೋರಾಟದ ನಾಯಕತ್ವ ವಹಿಸಿದ. ಇಪ್ಪತ್ತು ವರ್ಷಗಳಲ್ಲಿ ಹತ್ತು ವರ್ಷ ಸೆರೆವಾಸ.

ಸೆರೆವಾಸದಿಂದ ಹೊರಬಂದ ನಂತರ 1974 ರಿಂದ ಜಿಂಬಾಬ್ವೆ ಸ್ವಾತಂತ್ರ್ಯ ಚಳವಳಿಯನ್ನು ಮುಗಾಬೆ ಚುರುಕುಗೊಳಿಸಿದ. ಮೊಜಾಂಬಿಕ್, ಪೀಕಿಂಗ್‌ಗಳಿಂದ ಶಸ್ತ್ರಾಸ್ತ್ರ ನೆರವು ಪಡೆದು ಬಿಳಿಯ ಇಯಾನ್‌ಸ್ಮಿತ್ ಸರ್ಕಾರದ ವಿರುದ್ಧ ಸತತ ಗೆರಿಲ್ಲಾ ಹೋರಾಟ ಆರಂಭಿಸಿದ. ಈ ಹೋರಾಟದ ಅವಧಿಯಲ್ಲಿ ಮುಗಾಬೆ ಮತ್ತು ಎನ್‌ಕೋಮು ಮೇಲೆ ನಾಲ್ಕೈದು ಬಾರಿ ಕೊಲೆ ಯತ್ನಗಳು ನಡೆದವು.

ಈ ಉಭಯ ನಾಯಕರಿಬ್ಬರ ನೇತೃತ್ವದ ಗೆರಿಲ್ಲಾ ಹೋರಾಟಕ್ಕೆ ಬ್ರಿಟಿಷ್ ವಸಾಹತುಶಾಹಿ ಸರ್ಕಾರ ಕೊನೆಗೂ ಮಣಿದು ಹೋರಾಟ ನಿಲ್ಲಿಸುವಂತೆ ಒಪ್ಪಂದ ಮಾಡಿಕೊಂಡು ಚುನಾವಣೆ ಘೋಷಿಸಿತು.

ಕಳೆದ ಫೆಬ್ರುವರಿ ಕೊನೆವಾರದಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 100 ಸ್ಥಾನಗಳ ಪೈಕಿ ಮುಗಾಬೆಯ 'ಜಾನು' 57 ಮತ್ತು ಎನ್‌ಕೋಮುವಿನ 'ಜಾಪು' 20 ಸ್ಥಾನಗಳನ್ನು ಗೆದ್ದುಕೊಂಡವು. ವರ್ಣೀಯರ ಕೈಗೊಂಬೆ 'ಮುಜೆರೆವಾ' ಪಕ್ಷ 3 ಮತ್ತು ಪ್ರತ್ಯೇಕ ಚುನಾವಣೆಯಿಂದ ಬಿಳಿಯರು 20 ಸ್ಥಾನಗಳನ್ನು ಗಳಿಸಿ ಸೋಲುಕಂಡರು.

ಸಾರ್ವತ್ರಿಕ ಚುನಾವಣೆಯಲ್ಲಿ ಅದ್ಭುತ ಜಯಗಳಿಸಿದ ಮುಗಾಬೆಗೆ ಸರ್ಕಾರ ರಚಿಸಲು ಗೌರ್ನರ್ ಲಾರ್ಡ್ ಸೋಮಸ್‌ರಿಂದ ಆಹ್ವಾನ. ಬಿಳಿಯರಿಂದ ವಿಮೋಚಿತರಾಗಿ ಕರಿಯ ಆಡಳಿತ ಆರಂಭಿಸಿರುವ ಮುಗಾಬೆ ಜನತಂತ್ರ ಸರ್ಕಾರದಲ್ಲಿ ತಮಗೆ ವಿಶ್ವಾಸವಿರುವುದಾಗಿ ದೇಶದ ಜನರಿಗೆ ವಿಶೇಷವಾಗಿ ಬಿಳಿಯರಿಗೆ ಅಭಯ ಹಸ್ತ ನೀಡಿದ್ದಾರೆ.

KRNB 364 Panchama Fortnightly 5, April 1980 Regd. No. 29681/76

ಅಂಬೇಡ್ಕರ್‌ರವರ ಆಸೆಯನ್ನು ಚಿಗುರಿಸೋಣ

ಏಪ್ರಿಲ್ 14 ರಂದು ಅಂಬೇಡ್ಕರ್ ಅವರ 89ನೇ ಜನ್ಮ ದಿನ. ಅಂಬೇಡ್ಕರ್ ಅವರ ಹುಟ್ಟಿನ ದಿನವನ್ನು ಒಂದು ಬಗೆಯಲ್ಲಿ ದಲಿತರ ವಿಮೋಚನಾ ದಿನವೆಂದೇ ಪರಿಗಣಿಸಬೇಕು. ಶತಶತಮಾನಗಳಿಂದ ಬದುಕಿನ ಎಲ್ಲ ಮುಖಗಳಿಂದಲೂ ಅಲಕ್ಷಿಸಲ್ಪಟ್ಟ, ಶೋಷಣೆಗೆ ಒಳಗಾಗಿ ಅವಮಾನವೀಯ ನಿಕೃಷ್ಟತೆಯಿಂದ ಕತ್ತಲ ಬದುಕಿನಲ್ಲಿದ್ದ ದಲಿತರನ್ನು ಎಚ್ಚರಿಸಿದ ಧೀಮಂತ ನಾಯಕ ಅವರು.

ಶೋಷಿತವರ್ಗಗಳ ಹುಟ್ಟು ಹೋರಾಟಗಾರ ಮಾತ್ರವೇ ಆಗಿರದೆ ಐದು ಸಾವಿರ ವರುಷಗಳ ದಲಿತರ ಮೇಲಿನ ಶೋಷಣೆಯ ವಿರುದ್ಧ ಸಿಡಿದ ಒಂದು ಪ್ರತಿಭಟನೆಯ ಸಂಕೇತವೂ ಆಗಿದ್ದರು.

ಇನ್ನೂ ವಿಮುಕ್ತಿ ಕಾಣದ ನಮ್ಮ ಕಡುಕಷ್ಟಗಳನ್ನು ಒಮ್ಮೊಮ್ಮೆ ನೆನೆದಾಗ ಅಂಬೇಡ್ಕರ್ ಇನ್ನೈದು ವರ್ಷವಾದರೂ ಅಥವಾ ಈಗ ಬದುಕಿದ್ದರೆ...? ಎಂಬ ಆಸೆಯನ್ನು, ಕನಸನ್ನು ಅವರಲ್ಲಿ ಕಂಡುಕೊಳ್ಳುತ್ತೇವೆಯಾದರೂ ಈಗ ಅಂತಹ ಆಶಯ, ಹೋರಾಟಗಳನ್ನು ನಮ್ಮಲ್ಲೇ ನಾವು ಕಂಡುಕೊಳ್ಳಬೇಕಾಗಿರುವುದು ತೀರಾ ಅನಿವಾರ್ಯ.

ಅವರು ಆರಂಭಿಸಿದಂತಹ ಹೋರಾಟ ಮುಂದುವರಿಯದಿರುವುದು ದುರಾದೃಷ್ಟಕರ ಮಾತ್ರವಲ್ಲದೆ ಅಂತಹ ಶಕ್ತಿಯುತ ನಾಯಕತ್ವ ನಮಗಿನ್ನು ದೊರೆತಿಲ್ಲ. ಇಂತಹ ಮಹಾ ಮಾನವನ ವ್ಯಕ್ತಿತ್ವವನ್ನು ಮರೆಮಾಚಲು ಈ ವಿಕೃತ ಸಮಾಜ ಒಂದು ಗಂಡುಗಾಂಧಿಯನ್ನು ಮತ್ತೊಂದು ಹೆಣ್ಣುಗಾಂಧಿಯನ್ನು ದಲಿತರ ನಿಜ ನಾಯಕರೆಂದು ಸಾರುತ್ತಿದೆ. ಇಂತಹ ಹೇಯ ಕುಟಿಲ ಯತ್ನವನ್ನು ಆದಷ್ಟು ಚಿವುಟಿ ಹಾಕಬೇಕು. ನಮ್ಮನ್ನು ನಮ್ಮ ಸಮಸ್ಯೆಯನ್ನು ಅಲಕ್ಷಿಸಿದಂತೆ ನಮ್ಮ ಇತಿಹಾಸವನ್ನು ಮರೆಮಾಚುವ ಯತ್ನವಿದು.



ಬಿ. ಆರ್. ಅಂಬೇಡ್ಕರ್
(14-4-1891 6-12-1956)

ಆದ್ದರಿಂದ ನಾವೀಗ ಚಿಂತಿಸಬೇಕಾದುದೆಂದರೆ ನಮಗಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಅಂಬೇಡ್ಕರ್‌ರವರಿಗೆ ಎದುರಾದ ಅಡ್ಡಿ ಆತಂಕಗಳು, ಕಷ್ಟ ನಿಷ್ಠುರಗಳ ಜತೆಗೆ ಅವರೊಳಗಿನ ಅವೇದನೆ, ಆಕ್ರಂದನ ಎಷ್ಟು ತೀವ್ರವಾದುದೆಂಬುದನ್ನು ಅರಿತುಕೊಂಡು "ಯುಗಯುಗಗಳಿಂದ ದಾಸ್ಯ ಸಂಕೋಲೆಗಳಿಂದ ದಗ್ಧರಾಗಿ ಹೋಗಿರುವ ದಲಿತ ವರ್ಗಗಳು ದೇಶ ಆಳುವುದನ್ನು ನನ್ನ ಕಣ್ಣೆದುರಿನಲ್ಲಿ ನೋಡುವುದೇ ನನ್ನ ಜೀವನದ ಲಕ್ಷ್ಯ" ಎಂಬ ಅವರ ಆಸೆ ಅವರೊಡನೇ ಸತ್ತಿತಾದರೂ ಅದನ್ನು ಪುನರುಜ್ಜೀವನಗೊಳಿಸುವತ್ತ ಈ ಸಂದರ್ಭದಲ್ಲಿ ಯತ್ನಿಸೋಣ.

—ಸಂ

ನಾಡನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ಆಲವೆ

ಕೋಟಿ ಕೋಟಿ ಕಪ್ಪು ಜನರ
ಮೊಟ್ಟ ಮೊದಲ ಮಾತೇ
ನೀರಿನಾಚೆ ಮೋಡದಾಚೆ
ಮೊಳಗಿದಂಥ ಘೋಷವೆ

ಬಾಳಿನಲ್ಲಿ ಕಂಡುಕೊಂಡೆ
ಹೋರಾಟದ ದಾರಿಯ
ಕರೆದು ಕರೆದು ತೋರಿಸಿದೆ
ಮಹಾಮನೆಯ ಬಿರುಕನು

ಜಾತಿಯನ್ನು ಹೂತುಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ
ಸ್ವಾಭಿಮಾನ ಸಮುದ್ರ

ಮಹಾರಾಷ್ಟ್ರದ ಮಣ್ಣಿನಲ್ಲಿ
ಮೂಡಿಬಂದ ಗುಡುಗುಸಿಡಿಲೆ
ಮಳೆಯನೇಕೆ ತಾರಲಿಲ್ಲ
ಮಿಂಚು ಮಾಯ ಅಷ್ಟೆಯ ?

ಅಭಿಮಾನದ ನೇಗಿಲಿನಿಂದ
ಬಂಜರು ನೆಲ ಉತ್ತವನೆ
ಪಾತಿಮಾಡಿ ನಾಟಿಹಾಕಿ
ಬೆಳೆಯ ಕಾಣದೋದವನೆ

ಕಪ್ಪುಕ್ಕಿನ ಕೋಳಗಳನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾಬೌದ್ಧ ಭಿಕ್ಷುವೆ

ಮಲಗಿದ್ದವರ ಕೂರಿಸಿದೆ
ನಿಲಿಸುವವರು ಯಾರೋ
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ ?

—ಸಿದ್ದಲಿಂಗಯ್ಯ

Published by H. Govindaiah Printed at Nutan Printing press Bangalore-3. Editor : Ramadeva Rake -A Vani Institute of Commerce, Journalist Colony, Bangalore-560002.